*ಅನುಬಂಧ :*

# ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿಯಮಿತ)

***(ಕರ್ನಾಟಕ ಸರ್ಕಾರ ಸ್ವಾಮ್ಯದ ಉದ್ಯಮ)***

**(The Karnataka Minorities Development Corporations Ltd.)**

ವಿಶ್ವೇಶ್ವರಯ್ಯ ಕೇಂದ್ರ, 12ನೇ ಮಹಡಿ, ಮುಖ್ಯ ಗೋಪುರ, ಡಾ|| ಬಿ.ಆರ್. ಅಂಬೇಡ್ಕರ್ ವೀಥಿ, ಬೆಂಗಳೂರು -1

## ನಿಗಮ ಯೋಜನೆಗಳು ಕಿರು ನೋಟ

***(Schemes of the Corporation)***

**ಸ್ಥಾಪನೆ :**

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವನ್ನು 7-2-86ರಲ್ಲಿ ಸ್ಥಾಪಿಸಲಾಯಿತು. ಈ ನಿಗಮವು ಮತೀಯ ಅಲ್ಪಸಂಖ್ಯಾತರ ಏಳಿಗೆಗಾಗಿ ಅಂದರೆ, ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ಖರು, ಪಾರ್ಸಿಗಳು, ಮತ್ತು ಆಂಗ್ಲೋ ಇಂಡಿಯನ್‌ರವರುಗಳಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ರೂಪಿಸಿ ಕಾರ್ಯಗತ ಗೊಳಿಸುತ್ತಿದೆ.

**ಟಿಪ್ಪಣಿ:** ಜಾತಿ ಸರ್ಟಿಫಿಕೇಟು ನೀಡುವ ಕುರಿತು - ಸಮಾಜ ಕಲ್ಯಾಣ ಸಚಿವಾಲಯ ಸಂಕೋಲೆ ಸಂಖ್ಯೆ 16BCA 2003 ದಿ. 8-4-2003 - ಕರ್ನಾಟಕ ಗಜೆಡ್ ದಿನಾಂಕ 15-5-2003.

**ಯೋಜನೆಗಳು :**

- **I.** ಸಾಲದ ಯೋಜನೆಗಳು
- **II.** ತರಬೇತಿ ಯೋಜನೆಗಳು
- **III.** ಗಂಗಾ ಕಲ್ಯಾಣ ಯೋಜನೆಗಳು

## I. ಸಾಲದ ಯೋಜನೆಗಳು :

(ಅ) **ಸ್ವಾವಲಂಬನ ಮಾರ್ಜಿನ್ ಹಣ ಸಾಲದ ಯೋಜನೆ :** ಸ್ವಾವಲಂಬನೆ ಯೋಜನೆಯಲ್ಲಿ ವಾಣಿಜ್ಯ ಬ್ಯಾಂಕುಗಳು, ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕು, ಮತ್ತು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗಳು ಮುಖಾಂತರ ಅಲ್ಪಸಂಖ್ಯಾತರ ಜನರು ಕೈಗೊಳ್ಳಬಯಸುವ ಅಥವಾ ಅಭಿವೃದ್ಧಿ ಪಡಿಸಲು ಬಯಸುವ ಯೋಜನೆಗಳು ಅಂದರೆ, ವ್ಯಾಪಾರ, ಗುಡಿ ಕೈಗಾರಿಕೆ ಸೇವೆಗಳು, ಕೃಷಿ ಇತ್ಯಾದಿಗಳು ಸೌಲಭ್ಯಗಳನ್ನು ಒದಗಿಸಲಾಗುತ್ತದೆ.

**ಅರ್ಹತೆ :**

ಈ ಯೋಜನೆಯಲ್ಲಿ ಸಾಲ ಪಡೆಯ ಬಯಸುವ ಅರ್ಜಿದಾರರು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು. ಅರ್ಜಿದಾರರು ಸರ್ಕಾರದ ಆದೇಶದನ್ವಯ ಮತೀಯ ಅಲ್ಪಸಂಖ್ಯಾತರ ಗುಂಪಿಗೆ ಸೇರಿದವರಾಗಿದ್ದು ವಾರ್ಷಿಕ ಆದಾಯ ರೂ. 2,000.00 ಅಥವಾ ಅದಕ್ಕಿಂತ ಕಡಿಮೆ ಇರಬೇಕು. ಮೂಲಭೂತವಾಗಿ ಅರ್ಜಿದಾರರು ಕೊಳ್ಳುವ ಯೋಜನೆಯಲ್ಲಿ ಸಾಕಷ್ಟು ಅನುಭವ ಮತ್ತು ಪರಿಣಿತಿ ಹೊಂದಿರಬೇಕು.





### 1. ಮಾರ್ಜಿನ್ ಹಣದ ನೆರವು:

ನಿಗಮವು ಗುರುತಿಸಿದ ಅಲ್ಪಸಂಖ್ಯಾತರ ಜನರ ಅರ್ಜಿಗಳನ್ನು ಸಂಬಂಧಪಟ್ಟ ಬ್ಯಾಂಕುಗಳಿಗೆ ಯೋಜನೆಯ ಆರ್ಥಿಕ ಸಮಂಜಸತೆ ಮತ್ತು ಲಾಭದಾಯಕತೆಯನ್ನು ಪರಿಶೀಲಿಸಿ ಸಾಲ ಮಂಜೂರು ಮಾಡಲು ಕಳುಹಿಸಲಾಗುತ್ತದೆ. ಜಿಲ್ಲಾ ಸಮಿತಿಯು ಬ್ಯಾಂಕಿನಿಂದ ಬಂದು ಪ್ರಸ್ತಾವನೆಗಳನ್ನು ಮಂಜೂರು ಮಾಡಿ ನಿಗಮಕ್ಕೆ ಮಾರ್ಜಿನ್ ಹಣ ಹಾಗೂ ಸಹಾಯ ಧನ ಬಿಡುಗಡೆ ಮಾಡಲು ಶಿಫಾರಸ್ಸು ಮಾಡುತ್ತಾರೆ. ಮಾರ್ಜಿನ್ ಹಣ ಸಾಲಕ್ಕೆ ಶೇಕಡ 7 ರಷ್ಟು ಬಡ್ಡಿಯನ್ನು ವಿಧಿಸಲಾಗುತ್ತದೆ. ಇದು ಸಹಾಯ ಧನ ಅಲ್ಲ, ಬ್ಯಾಂಕುಗಳಿಂದ ಮಂಜೂರಾದ ಸಾಲದ ಮೊತ್ತಕ್ಕೆ ಚಾಲ್ತಿಯಲ್ಲಿರುವ ಬಡ್ಡಿ ದರವನ್ನು ವಿಧಿಸುತ್ತಾರೆ.

ಈ ಕೆಳಕಂಡಂತೆ ಮಾರ್ಜಿನ್ ಹಣವನ್ನು ಹಾಗೂ ಸಹಾಯ ಧನವನ್ನು ನಿಗಮದಿಂದ ಬಿಡುಗಡೆ ಮಾಡಲಾಗುವುದು. ಹಣಕಾಸು ಸಂಸ್ಥೆಗಳು ತಮ್ಮ ಸಾಲದೊಂದಿಗೆ ನಿಗಮದಿಂದ ಬಿಡುಗಡೆ ಮಾಡಿಜದ ಮಾರ್ಜಿನ್ ಹಣವನ್ನು ಹಾಗೂ ಸಹಾಯ ಧನವನ್ನು ಫಲಾನುಭವಿಗಳಿಗೆ ಬಿಡುಗಡೆ ಮಾಡುತ್ತದೆ. ಹಣಕಾಸು ಸಂಸ್ಥೆಗಳು ತಮ್ಮ ಭಾಗದ ಸಾಲದೊಂದಿಗೆ ಮಾರ್ಜಿನ್ ಹಣವನ್ನು ಸಹ ನಿಗದಿಪಡಿದ ಕಂತುಗಳಿಗೆ ಪಡೆದು ಆಯಾ ಹಣಕಾಸು ಸಂಸ್ಥೆಯ ಶಾಖೆಗಳು ವಸೂಲಿ ಮಾಡಿ ನಿಗಮದ ಪಾಲಿಗೆ ಶೇ. 7ರ ಬಡ್ಡಿಯೊಂದಿಗೆ ನಿಗಮಕ್ಕೆ ಕಳುಹಿಸಿಕೊಡುತ್ತವೆ. (ಅವಶ್ಯಕ ಇದ್ದಂತಹ ಸಂದರ್ಭದಲ್ಲಿ ಸರ್ಕಾರಿ/ನಿಗಮವು ಮಾರ್ಪಡಿಸಲಾಗುತ್ತದೆ)

| ಕ್ರಮ ಸಂಖ್ಯೆ | ಯೋಜನಾವೆಚ್ಚ | ನಿಗಮದ ಪಾಲು ಮಾರ್ಜಿನ್ ಹಣ ಸಾಲ | ನಿಗಮದಿಂದ ಸಹಾಯಧನ | ಫಲಾನುಭವಿಯ ವಂತಿಕೆ | ಬ್ಯಾಂಕ್/ಕೆಎಸ್ಎಫ್‌ಸಿ ಸಹಕಾರಿ ಬ್ಯಾಂಕ್ ಕ್ರೆಡಿಟ್ ಸಹಕಾರ ಸಂಘಗಳ ಪಾಲಿನ ಸಾಲ |
|---|---|---|---|---|---|
| 1. | ರೂ. 25,000/- ಗಳವರೆಗೆ | ಇಲ್ಲ | ಶೇ. 50 ರಷ್ಟು ಗರಿಷ್ಟ | ಇಲ್ಲ | ಶೇ. 50ರಷ್ಟು |
| 2. | ರೂ. 25,001 ರಿಂದ 50,000ಗಳ ವರೆಗೆ | ಶೇ. 20 ಗರಿಷ್ಟ ರೂ. 10,000/- | ರೂ. 5,000/- ಗರಿಷ್ಟ ರೂ. 5,000/- | ಶೇ. 5ರಷ್ಟು ಗರಿಷ್ಟ ರೂ. 2,500/- | ಉಳಿಕೆ ಮೊತ್ತ ರೂ. 32,5000/- ಗಳ ವರೆಗೆ |
| 3. | ರೂ. 50,001 ರಿಂದ ರೂ. 1,00,000/- | ಶೇ. 20 ರೂ. 10,000/- ಗಳಿಂದ ರೂ. 20,000/- ಗಳ ವರೆಗೆ | ಗರಿಷ್ಟ ರೂ. 5,000/- | ಶೇ. 5ರಷ್ಟು ಕನಿಷ್ಟ ರೂ. 2,500/- ಗರಿಷ್ಟ ರೂ. 5,000/- ಗಳ ವರೆಗೆ | ಉಳಿಕೆ ಮೊತ್ತ 32,500 ಗಳಿಂದ ಗರಿಷ್ಟ ರೂ. 70,000/- ಗಳ ವರೆಗೆ |

### (2) ಸಹಕಾರ ಸಂಘಗಳ ಮುಖಾಂತರ ಸಾಲ ನೀಡಿಕೆ:

ಸಹಕಾರ ಸಂಘಗಳ ಕಾಯಿದೆ 1959ರ ಮುಖಾಂತರ ನೋಂದಾಯಿಸಲ್ಪಟ್ಟು ಅಲ್ಪಸಂಖ್ಯಾತರ ವರ್ಗಗಳ ಏಳಿಗೆಗಾಗಿ ಕಾರ್ಯ ನಿರ್ವಹಿಸುತ್ತಿರುವ, ಲಾಭದಲ್ಲಿರುವ ಮತ್ತು ಸದಸ್ಯರಿಗೆ ಸಾಲ ನೀಡಲು ಸಾಕಷ್ಟು ಹಣಕಾಸು ಬೆಂಬಲವಿರುವ ಸಹಕಾರಿ ಸಂಘಗಳು ಮುಖಾಂತರ ನಿಗಮವು ಸಾಲದ ಯೋಜನೆಗಳನ್ನು ಅನುಷ್ಠಾನಗೊಳಿಸುವ ಅವಕಾಶವನ್ನು ಮಾಡಿಕೊಂಡಿದೆ. ಈ ಸೌಲಭ್ಯವನ್ನು ಪಡೆಯಲಿಚ್ಛಿಸುವ ಸಹಕಾರ ಸಂಘಗಳು ನಿಗಮಕ್ಕೆ ಈ ಕೆಳಕಂಡ ದಾಖಲಾತಿಗಳನ್ನು ಒದಗಿಸಬೇಕಾಗುತ್ತದೆ.

(1) ಸಂಘದ ನೋಂದಣಿ ಪ್ರತಿ.

(2) ಕಳೆದ 3 ವರ್ಷದ ಲೆಕ್ಕ ತಪಾಸಣಾ ವರದಿ ಸ್ಥಿತಿ ವಿವರಣಾ ಪಟ್ಟಿ, ಲಾಭ-ನಷ್ಟದ ತಃಖ್ತೆ ಮತ್ತು ಆದಾಯ-ಖರ್ಚುಗಳು ತಃಖ್ತೆ.

(3) ಪ್ರತಿಕೂಲ ಆಡಿಟ್ ಆಕ್ಷೇಪಣೆ ಇಲ್ಲದಿರುವ ಬಗ್ಗೆ ಸಂಬಂಧಿಸಿದ ಇಲಾಖಾ ಅಧಿಕಾರಿಯಿಂದ ದಾಖಾಲಾತಿ ಪತ್ರ.

(4) ಸಹಕಾರ ಸಂಘದ ಬೈಲಾಸ್ ಮತ್ತು ರಾಜ್ಯಮಟ್ಟದ ನಿಗಮದ ಮತ್ತು ಹಣಕಾಸು ಸಂಸ್ಥೆಗಳಿಂದ ಹಣ ಪಡೆಯುವ ಬಗ್ಗೆ ಅವಕಾಶ ಮಾಡಿಕೊಂಡಿರುವ ವಿವರ.

(5) ನಿಗಮದಿಂದ ಸಾಲ ಪಡೆಯಲು ಸಂಘದ ಸದಸ್ಯರು ಮಾಡಿರುವ ಸರ್ವಾನುಮತದ ನಿರ್ಣಯದ ಪ್ರತಿ. ಹಾಗೂ ಮತ್ತು ಬಡ್ಡಿಯನ್ನು ವಸೂಲು ಮಾಡಿ ನಿಗಮಕ್ಕೆ ಸಲ್ಲಿಸುವ ಬಗ್ಗೆ ಕರಾರು ಪತ್ರ.

(6) ನಿಗಮವು ನೀಡುವ ಮಾರ್ಜಿನ್, ಹಣ ಸೇರಿಸಿ ಫಲಾನುಭವಿಗಳಿಗೆ ವಿತರಿಸುವ ಬಗ್ಗೆ ಖಾತ್ರಿ ಪತ್ರ ಮತ್ತು ಇನ್ನಿತರ ಅಗತ್ಯ ಮಾಹಿತಿಗಳನ್ನು ಒದಗಿಸಬೇಕು.

## (3) ಅರಿವು ಯೋಜನೆ :

ಈ ಯೋಜನೆ ಅಡಿಯಲ್ಲಿ ವೃತ್ತಿ ನಿರತ ವಿದ್ಯಾಭ್ಯಾಸಕ್ಕಾಗಿ ಅಂದರೆ ಎಂ.ಬಿ.ಬಿ.ಎಸ್. ಇಂಜನಿಯರಿಂಗ್ ಹಾಗೂ ಬಿ.ಡಿ.ಎಸ್. ವಿದ್ಯಾಭ್ಯಾಸಕ್ಕಾಗಿ ಅಭ್ಯರ್ಥಿಗಳಿಗೆ ನಿಗಮದಿಂದ ವಾರ್ಷಿಕವಾಗಿ ರೂ. 10,000-00 ಗಳಂತೆ 5 ವರ್ಷದ ಅವಧಿಗೆ ರೂ. 50,000-00ಗಳವರೆಗಿನ ಸಾಲ ಸೌಲಭ್ಯಗಳನ್ನು ಕಲ್ಪಿಸುವ ಉದ್ದೇಶ ಹೊಂದಿದೆ ಇದಕ್ಕೆ ವಾರ್ಷಿಕವಾಗಿ ಶೇಕಡಾ 2ರಂತೆ ಬಡ್ಡಿ ವಿಧಿಸಲಾಗುತ್ತದೆ ಹಾಗೂ ವ್ಯಾಸಂಗ ಮುಗಿಸಿದ ಒಂದು ವರ್ಷದ ನಂತರ ಫಲಾನುಭವಿಯು ನಿಗಮಕ್ಕೆ ಮರುಪಾವತಿಯನ್ನು ಮಾಡಬೇಕಾಗಿದೆ. ಹೆಚ್ಚಿನ ಮಾಹಿತಿಯನ್ನು ಆಯಾ ಜಿಲ್ಲಾ ಕಛೇರಿಯಿಂದ ಪಡೆಯತಕ್ಕದ್ದು.

## (4) ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ದಿ ಮತ್ತು ಹಣಕಾಸು ನಿಗಮದ ಸಾಲದ ಯೋಜನೆಗಳು:

ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮವನ್ನು 1994 ರಲ್ಲಿ ಮಟ್ಟದಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಸ್ಥಾಪನೆಯಾಗಿರುತ್ತದೆ. ರಾಷ್ಟ್ರೀಯ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮದ ಅಲ್ಪ ಸಂಖ್ಯಾತರಿಗೆ ಸಾಲ ಸೌಲಭ್ಯವನ್ನು ತನ್ನ ಅಧಿಕೃತ ಸಂಸ್ಥೆಗಳ ಮೂಲಕ ನೆರವನ್ನು ಒದಗಿಸುತ್ತದೆ. ಕರ್ನಾಟಕದಲ್ಲಿ ಕರ್ನಾಟಕ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮವು ಇದರ ಅಭಿಕೃತ ಸಂಸ್ಥೆಯಾಗಿರುತ್ತದೆ.

ರಾಷ್ಟ್ರೀಯ ಅಲ್ಪ ಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮದವರು ತನ್ನ ಸಂಸ್ಥೆಗಳಿಗೆ ತಾವು ಅನುಮೋದಿಸಿದ ಯೋಜನೆಗಳಿಗೆ ಹಣವನ್ನು ಸಾಲವನ್ನಾಗಿ ಬಿಡುಗಡೆ ಮಾಡುತ್ತಾರೆ. ಎನ್.ಎಮ್.ಡಿ.ಎಫ್.ಸಿ. ರವರು ಮಾರ್ಜಿನ್ ಹಣ ಹಾಗೂ ಅವಧಿ ಸಾಲದ ಯೋಜನೆಗಳಿಗೆ ಹಣವನ್ನು ಸಾಲದ ರೂಪದಲ್ಲಿ ಬಿಡುಗಡೆ ಮಾಡುತ್ತಾರೆ. ಮಾರ್ಜಿನ್ ಹಣ ಸಾಲದಲ್ಲಿ ರಾಷ್ಟ್ರೀಯ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಘಟಕ ವೆಚ್ಚ ಶೇಕಡ 25ರಷ್ಟು, ರಾಜ್ಯ ನಿಗಮದಿಂದ ಶೇಕಡ 10ರಷ್ಟು ಮತ್ತು ಬ್ಯಾಂಕ್/ಕೆ.ಎಫ್.ಸಿ.ಯಿಂದ ಶೇಕಡ 60ರಷ್ಟು ಸಾಲ ಬಿಡುಗಡೆ ಮಾಡಲಾಗುತ್ತದೆ. ಹಾಗೂ ಶೇ. 5ರಷ್ಟನ್ನು ಫಲಾನುಭವಿಗಳೇ ಭರಿಸಬೇಕಾಗುತ್ತದೆ. ಅವಧಿ ಸಾಲದಲ್ಲಿ ರಾಷ್ಟ್ರೀಯ ನಿಗಮದಿಂದ ಘಟಕದ ವೆಚ್ಚ ಶೇಕಡ 85 ರಷ್ಟು ರಾಜ್ಯ ನಿಗಮದಿಂದ ಶೇಕಡ 10 ರಷ್ಟು ಹಾಗೂ ಫಲಾನುಭವಿಯಂವಂತಿಕೆ ಶೇಕಡ 5 ರಷ್ಟು ಇರುತ್ತದೆ.





## (5) ಎನ್‌ಎಮ್‌ಡಿಎಫ್‌ಸಿ ಯೋಜನೆಗಳಲ್ಲಿ ಯೋಜನಾ ವೆಚ್ಚ ರೂ.5-00 ಲಕ್ಷಗಳ ವರೆಗೆ ಸಾಲ ಸೌಲಭ್ಯ :

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು 1999-2000ನೇ ಸಾಲಿನಿಂದ ಸರ್ಕಾರಿ ಆದೇಶ ಸಂಖ್ಯೆ / ಸಕಇ 18 ಬಿಸಿಎ 99, ಬೆಂಗಳೂರು ದಿನಾಂಕ 17-4-99 ರನ್ವಯ ಮಾರ್ಜಿನ್ ಹಣ ಸಾಲದ ಯೋಜನೆಯಡಿಯಲ್ಲಿ ಯೋಜನಾವೆಚ್ಚ ರೂ. 5-00 ಲಕ್ಷದ ವರೆಗೆ ಸಾಲ ಸೌಲಭ್ಯ ನೀಡಲು ಪ್ರಾರಂಭಿಸಿದೆ. ಈ ಯೋಜನೆಯಲ್ಲಿರುವಂತೆಯೇ ಇರುತ್ತದೆ. ಆದಾಗ್ಯೂ ಶೇ. 60ರಷ್ಟು ಯೋಜನಾ ವೆಚ್ಚವನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳು/ಕೆಎಸ್‌ಎಫ್‌ಸಿ, ಶೇ. 25ರಷ್ಟು ವೆಚ್ಚವನ್ನು ಎನ್‌ಎಮ್‌ಡಿಎಫ್‌ಸಿ, ಶೇ. 10 ರಷ್ಟು ವೆಚ್ಚವನ್ನು ಕೆಎಮ್‌ಡಿಸಿ ಶೇ. 5ರಷ್ಟು ವೆಚ್ಚವನ್ನು ಫಲಾನುಭವಿಯೇ ಭರಿಸಬೇಕಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಅಪೇಕ್ಷಿತ ಫಲಾನುಭವಿಗಳು ಸಂಬಂಧಪಟ್ಟ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಜಿಲ್ಲಾ ಅಧಿಕಾರಿಯನ್ನು ಸಂಪರ್ಕಿಸಲು ತಿಳಿಸಲಾಗಿದೆ.

## (6) ಸಣ್ಣ ಮತ್ತು ಅತೀ ಸಣ್ಣ ಸಾಲಗಳು:

ರಾಷ್ಟ್ರೀಯ ಅಲ್ಪ ಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮದವರು ರಾಜ್ಯದ ನಿಗಮದ ಮೂಲಕ ಸಣ್ಣ ಮತ್ತು ಅತೀ ಸಣ್ಣವ್ಯಾಪಾರದ ವೃತಿಗಳಿಗೆ ರೂ. 500 ಗಳಿಂದ ರೂ. 10,000 ಗಳವರೆಗೆ ನೇರ ಸಾಲ ಸೌಲಭ್ಯಗಳನ್ನು ಅಲ್ಪಸಂಖ್ಯಾತರ ಜನರುಗಳಿಗೆ ನೊಂದಾಯಿತ ಸಂಘ ಸಂಸ್ಥೆಗಳಿಗೆ ಮೂಲಕ ಸಾಲವನ್ನು ಒದಗಿಸಲಾಗುತ್ತದೆ. ಫಲಾನುಭವಿಗಳು ನೊಂದಾಯಿತ ಸಂಘ ಸಂಸ್ಥೆಗಳಲ್ಲಿ ನೊಂದಾಣಿ ಮಾಡಿರುವಂತರಿಗೆ ಈ ಸಾಲ ಸೌಲಭ್ಯಗಳನ್ನು ಒದಿಗಿಸಲಾಗುತ್ತದೆ.

(ಅ) ಅವಧಿ ಸಾಲಕ್ಕೆ ಶೇ. 7ರ ಬಡ್ಡಿದರವನ್ನು ಹಾಗೂ ಸಾರಿಗೆ ವಾಹನಕ್ಕೆ ಶೇ. 12 ಬಡ್ಡಿದರದಂತೆ ನಿಗಮವು ವಿಧಿಸವುದು.

(ಆ) ಸಣ್ಣ ಮತ್ತು ಅತೀ ಸಾಲಕ್ಕೆ ಶೇ. 8 ಬಡ್ಡಿ ದರವನ್ನು ನಿಗಮವು ವಿಧಿಸುವುದು.

## (7) ಸಾಲ ಪಡೆಯುವ ವಿಧಾನ:

ರಾಷ್ಟ್ರೀಯ ನಿಗಮದವರು ಅನುಮೋದಿಸಿರುವ ಯೋಜನೆಗಳನ್ನು ನಿಗದಿಪಡಿಸಿದ ಗುರಿಗೆ ಅನುಗುಣವಾಗಿ ಕೇಂದ್ರ ಕಛೇರಿಯಿಂದ ಎಲ್ಲಾ ಜಿಲ್ಲೆಗಳಿಗೂ ಗುರಿಯನ್ನು ನಿಗದಿ ಪಡಿಸಲಾಗುತ್ತದೆ. ನಿಗದಿ ಪಡಿಸಿ ಗುರಿಗೆ ಅನುಗುಣವಾಗಿ ವ್ಯಾಪಕ ಪ್ರಚಾರ ನೀಡಿ ಜಿಲ್ಲಾ ಅಧಿಕಾರಿಗಳು ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆಯವರು ದಿನಪತ್ರಿಕೆಗಳಲ್ಲಿ ಅರ್ಜಿಯನ್ನು ಅಹ್ವಾನಿಸುತ್ತಾರೆ. ಫಲಾನುಭವಿಗಳು ಬಿಳಿಯ ಹಾಳೆಯಲ್ಲಿ ಸ್ವಯಂ ಲಿಖಿತ ಅರ್ಜಿಯೊಂದಿಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಪಡಿತರ ಚೀಟಿ ನಕಲು, ಭಾವಚಿತ್ರ ಹಾಗೂ ಪ್ರಾಜೆಕ್ಟ್ ವರದಿಯ ಜೊತೆಗೆ ಆಯಾ ಜಿಲ್ಲೆಯಲ್ಲಿ ರಾಷ್ಟ್ರೀಯ ನಿಗಮ ಅನುಮೋದಿಸಿದ ಯೋಜನೆಗೆ ಅರ್ಜಿಯನ್ನು ಹಾಕತಕ್ಕದ್ದು. ಜಿಲ್ಲಾ ಸಮಿತಿಯಿಂದ ಫಲಾನುಭವಿಗಳನ್ನು ಆಯ್ಕೆ ಮಾಡಿ ಕೇಂದ್ರ ಕಛೇರಿಯಿಂದ ನಿಗದಿ ಪಡಿಸಿದ ಇತರೆ ದಾಖಲಾತಿಯನ್ನು ಸಲ್ಲಿಸುವಂತೆ ಜಿಲ್ಲಾ ಅಧಿಕಾರಿಗಳು, ಕೇಂದ್ರ ಕಛೇರಿಗೆ ರವಾನಿಸಿ ಸಾಲ ಬಿಡುಗಡೆ ಮಾಡಲು ಆಯ್ಕೆ ಸಮಿತಿಯ ಶಿಫಾರಸ್ಸಿಯೊಂದಿಗೆ ಪ್ರಸ್ತಾವನೆಯನ್ನು ಕಳುಹಿಸುತ್ತಾರೆ. ಕೇಂದ್ರ ಕಛೇರಿಯಿಂದ ಫಲಾನುಭವಿಗಳಿಗೆ ಯಂತ್ರೋಪಕರಣ ಹಾಗೂ ವಾಹನಗಳಿಗೆ ನೊಂದಾಯಿತ ಹಾಗೂ ಅಧಿಕೃತ ಪಡೆದ ಕಂಪನಿಗಳಿಗೆ ನೇರವಾಗಿ ಚೆಕ್‌ನ್ನು ರವಾನಿಸಿ ಯಂತ್ರೋಪಕರಣ ಹಾಗೂ ವಾಹನಗಳಿಗೆ ಸಾಲವನ್ನು ಫಿಡುಗಡೆ ಮಾಡಲಾಗುತ್ತದೆ.

**ಅರ್ಹತೆ :** (1) ಸೌಲಭ್ಯ ಪಡೆಯುವ ಫಲಾನುಭವಿಗಳು ಸರ್ಕಾರಿ ಆದೇಶದ ಪ್ರಕಾರ ಅಲ್ಪಸಂಖ್ಯಾತ ವರ್ಗಗಳಿಗೆ ಸೇರಿದವರಾಗಿರಬೇಕು.

(2) ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.

(3) ಕುಟುಂಬ ವಾರ್ಷಿಕ ವರಮಾನವು ಗ್ರಾಮಾಂತರ ಅಭ್ಯರ್ಥಿಗಳಿದ್ದಲ್ಲಿ ರೂ. 31,953/- ಹಾಗೂ ನಗರ ಪ್ರದೇಶದ ಅಭ್ಯರ್ಥಿಗಳಿದ್ದಲ್ಲಿ ರೂ. 42,412-00ಗಳನ್ನು ಮೀರಿರಬಾರದು.

## (8) ಎನ್. ಎಂ.ಡಿ.ಎಫ್.ಸಿ. ಯೋಜನೆಯ ವಿವರಗಳು:

(1) ಬೇಕರಿ, (2) ಬೈಸಿಕಲ್ ಹೈರಿಂಗ್ ಮತ್ತು ರಿಪೇರಿಂಗ್, (3) ಮಾಂಸದ ಅಂಗಡಿ, (4) ಜನರಲ್ ಸ್ಟೋರ್, (5) ಬುಕ್ ಬೈಂಡಿಂಗ್, (6) ಮೆಡಿಕಲ್ ಶಾಪ್, (7) ಟಿ.ವಿ. ಆನ್ಟೆನ್ನಾ, (8) ಫ್ರೂಟ್ಸ್ ಮತ್ತು ವೆಜಿಟೇಬಲ್ಸ್ ವೆಂಡರ್, (9) ಆಟೋ ರಿಪೇರ್ ವರ್ಕ್ ಶಾಪ್ (ಎಲ್.ವಿ), (10) ಎಸ್.ಟಿ.ಡಿ./ಐ.ಎಸ್.ಡಿ./ಪಿ.ಸಿ.ಒ. ಯೂನಿಟ್, (11) ಫೋಟೋಗ್ರಫಿ, (12) ಬಫೇಲೋ ಡೈರಿ (13) ಫೋಟೋಕಾಪಿಯಿಂಗ್ ಯೂನಿಟ್ಇ, (14) ಪಾನ್ ಶಾಪ್, (15) ಲೆಧರ್ ಚಪ್ಪಲ್, (16) ಟೀ ಶಾಲ್, (17) ಲೇಥ್ ಮೆಶಿನ್, (18) ಡೆಂಟಲ್ ಕ್ಲಿನಿಕ್, (19) ಫಾಸ್ಟ್ ಫುಡ್ ಕಾರ್ನರ್, (20) ಟಿ.ಮಿ.ಬೂಸ್ಟರ್ (21) ಆಯಿಲ್ ಎಕ್ಸ್‌ಪೆಲ್ಲರ್, (22) ವಾಕ್ಸ್ ಕೇನ್ಡಲ್, (23) ಇಂಜಿನಿಯರಿಂಗ್, (24) ಡಿಟರ್ಜಂಟ್ ಕೇಕ್, (25) ಎಲೆಕ್ಟ್ರಾನಿಕ್ ಡೋರ್ ಬೆಲ್, (31) ಬ್ಯಾಟರಿ ಎಲಿಮಿನೇಟರ್, (32) ಸ್ಮಾಲ್ ಟ್ರಾನ್ಸ್‌ಫಾರ್ಮರ್, (33) ಧಾಬ, (34) ವೇಸ್ಟ್ ಬೆಲ್ಟ್ (35) ರೇಡಿಯೋ ರಿಸೀವರ್ಸ್, (36) ಕೇಬಲ್, (37) ಕ್ಲೋಥ್ಸ್ ಹ್ಯಾಂಗರ್, (38) ಬಾರ್ಬರ್ ಶಾಪ್, (39) ಎಮೆರ್ಜನ್ಸಿ ಲ್ಯಾಂಪ್, (40) ಬೆವರೇಜ್ ಶಾಪ್.

## II. ತರಬೇತಿ ಯೋಜನೆಗಳು:

**(ಅ)ವಾಹನ ಚಾಲನಾ ತರಬೇತಿ:** ಅಲ್ಪ ಸಂಖ್ಯಾತರ ನಿರುದ್ಯೋಗಿ ಯುವಕರಿಗೆ ಉದ್ಯೋಗ ಕೈಗೊಳ್ಳಲು ಭಾರಿವಾಹನ, ಲಘುವಾಹನ, ಮತ್ತು ಆಟೋರಿಕ್ಷಾ ವಾಹನ ಚಾಲನಾ ತರಬೇತಿ ಶಾಲೆಗಳ ಮೂಲಕ ತರಬೇತಿ ಕೊಡಿಸಲಾಗುವುದು, ತರಬೇತಿ ಪಡೆದ ಅಭ್ಯರ್ಥಿಯು ಖಾಯಂ ಚಾಲನಾ ಪರವಾನಗಿಯನ್ನು ಪಡೆದು ಸ್ವಯಂ ಉದ್ಯೋಗಿಯಾಗಲು ಅರ್ಹನಾಗುತ್ತದೆ.

**ಅರ್ಹತೆ :** (1) ಈ ಯೋಜನೆಯನ್ನು ನೆರವನ್ನು ಪಡೆಯಬಯಸುವ ಅಭ್ಯರ್ಥಿಯು ಮತೀಯ ಅಲ್ಪ ಸಂಖ್ಯಾತರ ವರ್ಗಕ್ಕೆ ಸೇರಿದವನಾಗಿರಬೇಕು.

(2) ಲಘುವಾಹನ ಚಾಲನಾ ತರಬೇತಿಗೆ 18 ವರ್ಷ, ಭಾರಿ ಮತ್ತು ಆಟೋರಿಕ್ಷಾ ಚಾಲನಾ ತರಬೇತಿಗೆ 20 ವರ್ಷಗಳಿಗಿಂತ ಕಡಿಮೆ ವಯೋಮಿತಿ ಇರಬಾರದು.

(3) ಅಭ್ಯರ್ಥಿಯು ಉದ್ಯೋಗಿಯಾಗಿರಬಾರದು.

(4) ಅಭ್ಯರ್ಥಿಯು ಯಾವುದೇ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರಬಾರದು. ಮತ್ತು ಯಾವುದೇ ತರಬೇತಿ ಪಡೆಯುತ್ತಿರಬಾರದು.

**ತರಬೇತಿ ಶುಲ್ಕ ಭತ್ಯೆ ಮತ್ತು ಅವಧಿ:** ತರಬೇತಿ ಅವಧಿಯಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ರೂ. 150.00ನ್ನು ಪರಸ್ಥಳದ ಅಭ್ಯರ್ಥಿಗಳಿಗೆ ರೂ. 300.00ಗಳನ್ನು ತರಬೇತಿ ಭತ್ಯೆಯನ್ನಾಗಿಯೂ ಮತ್ತು ತರಬೇತಿ ಸ್ಥಳಕ್ಕೆ





ಒಮ್ಮೆ ಬಂದು ಹೋಗುವ ಬಸ್ಸಿನ ದರ, ಲರ್ನಿಂಗ್ ಲೈಸೆನ್ಸ್ ಫೀ, ಪರ್ಮನೆಂಟ್ ಲೈಸೆನ್ಸ್ ಫೀಯನ್ನು ನೀಡುವುದಲ್ಲದೆ, ಆಯಾ ಪ್ರದೇಶದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನಿಗದಿ ಪಡಿಸಿದ ಶಿಕ್ಷಣ ಶುಲ್ಕವನ್ನು ತರಬೇತಿ ಶಾಲೆಗೆ ನಿಗಮದಿಂದ ನೀಡಲಾಗುವುದು. ತರಬೇತಿ ಅವಧಿ 30 ದಿನಗಳಾಗಿರುತ್ತವೆ.

**(ಆ)ಡಿಪ್ಲೊಮೊ ಮತ್ತು ಪೋಸ್ಟ್ ಡಿಪ್ಲೋಮೋ ಇನ್ ಪೋರಮನ್‌ಶಿಪ್ ತರಬೇತಿ:** ಐ.ಟಿ.ಐ ಹಾಗೂ ಡಿಪ್ಲೊಮೊ ಇನ್ ಮೆಕ್ಯಾನಿಕ್ ಅಥವಾ ಎಲೆಕ್ಟ್ರಿಕಲ್ ಇಂಜನಿಯರಿಂಗ್‌ನಲ್ಲಿ ತೇರ್ಗಡೆಯಾಗಿದ್ದು ನಿರುದ್ಯೋಗಿಯಾಗಿರುವ ಅಲ್ಪಸಂಖ್ಯಾತರ ವರ್ಗದ ನಿರುದ್ಯೋಗಿ ಯುವಕರಿಗೆ ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸಲು ಸ್ವಯಂ ಉದ್ಯೋಗಿಯಾಗುವಂತೆ ಮಾಡಲು ಕೇಂದ್ರ ಸರ್ಕಾರದ ಪೋರ್‌ಮನ್‌ಷಿಪ್‌ತರಬೇತಿಯನ್ನು ನಿಗಮದ ಮುಖಾಂತರ ಕೊಡಿಸಲಾಗುತ್ತದೆ. ತರಬೇತಿ ಅವಧಿಯಲ್ಲಿ ಅಭ್ಯರ್ಥಿಗಳಿಗೆ ಮಾಹೆಯಾನ 300 ರೂ.ಗಳು ಸ್ಥಳೀಯ ಅಭ್ಯರ್ಥಿಗಳಿಗೆ, ರೂ. 500.00ಗಳನ್ನು ಪರಸ್ಥಳದವರಿಗೆ ತರಬೇತಿ ಭತ್ಯೆಯನ್ನು ನೀಡಲಾಗುವುದು.

**(ಇ) ವೃತ್ತಿ ತರಬೇತಿತ ಯೋಜನೆಗಳು:**

| ಕ್ರಮ ಸಂಖ್ಯೆ | ತರಬೇತಿಯ ಹೆಸರು | ವಿದ್ಯಾರ್ಹತೆ | ತರಬೇತಿ ಅವಧಿ | ಮಾಹೆಯಾನ ಶಿಷ್ಯ ವೇತನ ರೂ. |
|---|---|---|---|---|
| 1. | ಟಿ.ವಿ. ವಿ.ಸಿ.ಪಿ. ವಿ.ಸಿ.ಆರ್., ರೇಡಿಯೋ ರಿಪೇರಿ ಮತ್ತು ಸರ್ವಿಸಿಂಗ್ ತರಬೇತಿ | ಎಸ್.ಎಸ್.ಎಲ್.ಸಿ. | 6 ತಿಂಗಳು | 300/- (ಸ್ಥಳೀಯರಲ್ಲದವರಿಗೆ) 150/- (ಸ್ಥಳೀಯರಿಗೆ) |
| 2. | ಕಂಪ್ಯೂಟರ್ ತರಬೇತಿ | ಎಸ್.ಎಸ್.ಎಲ್.ಸಿ./ ಪಿ.ಯು.ಸಿ/ಪದವಿ | 6/12 ತಿಂಗಳು | 300/- ” 150/- ” |
| 3. | ಜರಿ ಮತ್ತು ಎಂಬ್ರಾಡಯರಿ ತರಬೇತಿ (ಮಹಿಳೆಯರಿಗೆ) | ವಿದ್ಯಾರ್ಹತೆ ಬೇಕಾಗಿರುವುದಿಲ್ಲ | 03 ತಿಂಗಳು | 300/- ” 150/- ” |

ಮೇಲಿನ ತರಬೇತಿಗಳನ್ನು ಆಯಾ ಕೇಂದ್ರಗಳಲ್ಲಿ ಕೊಡಿಸಲಾಗುತ್ತದೆ.

ತರಬೇತಿ ಶುಲ್ಕ ಮತ್ತು ಕೋರ್ಸ್ ಮೆಟೀರಿಯಲ್ ಶುಲ್ಕವನ್ನು ಸದರೀ ಸಂಸ್ಥೆಗಳಿಗೆ ನಿಗಮದಿಂದ ಒದಗಿಸಲಾಗುವುದು. ಮತೀಯ ಅಲ್ಪಸಂಖ್ಯಾತ ಮಹಿಳೆಯರಿಗಾಗಿ ಹೆಚ್ಚಿನ ಮಾಹಿತಿ ನೀಡಲು ನಿಗಮವು ಹೊಸ ತರಬೇತಿ ಕಾರ್ಯಕ್ರಮಗಳನ್ನು ಪ್ರಾರಂಭಿಸಿದೆ. ಯಾವುದೆಂದರೆ : ಫ್ಯಾಶನ್ ಡಿಸೈನಿಂಗ್, ಪಿಪಿಟಿ, ಡಿಟಿಪಿ ಮತ್ತು ಮೆಡಿಕಲ್ ಟ್ರಾನ್ಸ್‌ಕ್ರಿಪಕ್ಷನ್ಸ್.

**ಪಿಪಿಟಿ/ಡಿಟಿಪಿ:** ಈಗಾಗಲೇ ಕಂಪ್ಯೂಟರ್ ತರಬೇತಿ 6 ತಿಂಗಳ ಅಥವಾ ಒಂದು ವರ್ಷ ಹೊಂದಿದ್ದು ನಿರುದ್ಯೋಗಿಗಳಾಗಿದ್ದಲ್ಲಿ ಅವರನ್ನು ಜಿ.ಟಿ.ಟಿ.ಸಿ., ರಾಜಾಜಿನಗರ, ಬೆಂಗಳೂರು (ಇಂಡೋಡಾನಿಶ್ ಯೋಜನೆ) ಇಲ್ಲಿ ತರಬೇತಿಗಾಗಿ ನಿಯೋಜಿಸಾಲುಗುವುದು. ಡಿಟಿಪಿ ತರಬೇತಿ 8 ವಾರಗಳು ಪಿಪಿಟಿ ತರಬೇತಿಯ 16 ವಾರಗಳು.

**ಮೆಡಿಕಲ್ ಟ್ರಾನ್ಸ್‌ಕ್ರಿಪ್ಷನ್ಸ್ :** ನಿರುದ್ಯೋಗ ಸಮಸ್ಯೆಯನ್ನು ಗಮನದಲ್ಲಿಟ್ಟುಕೊಂಡು ಇದನ್ನು ಸರಿಪಡಿಸಲು ಮೆಡಿಕಲ್ ಟ್ರಾನ್ಸ್‌ಕ್ರಿಪ್ಷನ್ಸ್ ಕೋರ್ಸ್‌ಗೆ ಹೆಚ್ಚಿನ ಬೇಡಿಕೆ ಇರುವುದನ್ನು ತಿಳಿದು ನಿಗಮವು ಈ ಯೋಜನೆಯನ್ನು ಕೈಗೊಳ್ಳಬಯಸಿದೆ. ತರಬೇತಿಯ ಅವಧಿ 3 ತಿಂಗಳು. ವಿದ್ಯಾರ್ಹತೆ ಪಿ.ಯು.ಸಿ./ ಡಿಗ್ರಿ/ಅರ್ಹ ಅಭ್ಯರ್ಥಿ ಈ ಅವಕಾಶವನ್ನು ಉಪಯೋಗಿಸಿಕೊಳ್ಳಬಹುದು.

**ಸೇವೆಗಳು :**(1) ಆಟೋ ಗ್ಯಾರೇಜ್, (2) ಆಟೋಮೊಬೈಲ್ ಸರ್ವೀಸಿಂಗ್, (3) ಆಯುರ್ವೇದಿಕ್ ಫಾರ್ಮಸಿ, (4) ಆಟೋರಿಕ್ಷಾ, (5) ಬುಟ್ಟಿ ಹೆಣೆಯುವುದು, (6) ಬ್ಯಾಟರಿ ಚಾರ್ಜಿಂಗ್, ರಿಪೇರಿ, ರೀಕಂಡೀಶನಿಂಗ್, (7) ಬ್ಯೂಟಿ, (11) ಬ್ಲ್ಯಾಕ್‌ಸ್ಮಿತ್ (12) ಮರಗೆಲಸ (Carpenter Work), (13) ಚಪ್ಪಲಿ ರಿಪೇರಿ, (14) ಕಾಫಿ ರೋಸ್ಟಿಂಗ್ ಮತ್ತು ಗ್ರೈಡಿಂಗ್, (15) ವಾಣಿಜ್ಯ ವಿದ್ಯಾಸಂಸ್ಥೆ, (16) ಸೈಕಲ್ ರಿಕ್ಷಾ , (17) ಸೈಕಲ್ ಅಂಗಡಿ, (18) ಕ್ಲಾತ್‌ಡೈಯಿಂಗ್, (19) ಕಮರ್ಷಿಯಲ್ ಆರ್ಟಿಸ್ಟ್, (20) ಕ್ಯಾಸಿಟ್ ರೆಕಾರ್ಡಿಂಗ್, (21) ಕ್ರೀಚ್/ಬೇಬಿ ಸಿಟ್ಟಿಂಗ್, (22) ಡ್ರೈಕ್ಲೀನಿಂಗ್, (23) ಡೀ ಫೈಬ್ರಿಂಗ್ ಅಫ್ ಕಾಯರ್, (24) ವೈದ್ಯರು/ದಂತ ವೈದ್ಯರ ಔಷದಾಲಯ (Doctors/Dentists Clinic), (25) ಎಲೆಕ್ಟ್ರೋಪ್ಲೇಟಿಂಗ್, (28) ಹಿಟ್ಟಿನ ಗಿರಣಿ, (Flour Mills), (29) ಗ್ಯಾಸ್ ವೆಲ್ಡಿಂಗ್, (30) ಗೋಲ್ಡ್ ಮತ್ತು (ಚಿನ್ನ ಕೆಲಸ ಮಾಡುವವರು), (31) ಕೈ ಗಾಡಿ ಮತ್ತು ಎತ್ತಿನ ಗಾಡಿ ಸರ್ವೀಸ್, (32) ಐರನ್ ಮತ್ತು ಮೆಟರ್ ವರ್ಕ್ಸ್, (33) ಲಾ ಪ್ರಾಕ್ಟೀಷನರ್, (34) ಲಾಂಡ್ರಿ ವರ್ಕ್, (36) ಅಕ್ಕಿ ಪಾಲಿಶ್ ಮಾಡುವ ಯಂತ್ರ (ಮಶಿನ್ ಫಾರ್ ಪಾಲಿಶಿಂಗ್), (37) ಸಂಗೀತ ವಾದ್ಯಗಳ ರಿಪೇರಿ (ಮ್ಯೂಸಿಕಲ್ ಇನ್ಸ್‌ಟ್ರೂಮೆಂಟ್ಸ್ ರಿಪೇರ್), (38) ಫೋಟೋ ಫ್ರೇಮಿಂಗ್, (39) ಪೇಪರ್ ಕಟಿಂಗ್ ಮೆಶಿನ್, (40) ಫೋಟೋ ಸ್ಟುಡಿಯೋ, (41) ಪಂಪ್‌ಸೆಟ್ ರಿಪೇರಿ, (42) ವಾಚ್ ಕೇಸಸ್ ಪಾಲಿಶಿಂಗ್ (43) ಪ್ಲಾಸ್ಟಿಕ್ ನಾಮಫಲಕ (Plastic Name Plate) (44) ಪ್ಲಾಸ್ಟಿಕ್ ಬಕೆಟ್ ರಿಪೇರಿ, (45) ಫೋಸ್ಟರ್ ತಯಾರಿಕೆ, (46) ಪ್ಯಾಥಾಲಾಜಿಕಲ್ ಲ್ಯಾಬೋರೇಟರಿ, (47) ರೇಡಿಯೋ ರಿಪೇರಿ (48) ರಿಪೇರ್ ಆಫ್ ಡೊಮೆಸ್ಟಿಕ್ ಅಪ್ಲೈಯನ್ಸ್‌ಸ್, (49) ರೂಲಿಂಗ್ ಅಂಡ್ ಬುಕ್, (50) ರೇಡಿಯೇಟರ್ ರಿಪೇರಿ, (51) ಸಲೂನ್, (52) ಸ್ಟೋವ್ ರಿಪೇರಿ, (53) ಸಿಲ್ಕ್ ರೀಲಿಂಗ್, (54) ಸ್ಟೋನ್ ಕಟಿಂಗ್ ವರ್ಕ್ (ಕಲ್ಲು ಕತ್ತರಿಸುವ ಕೆಲಸ), (55) ಸ್ಟೆಯಿಂಗ್ ವೈಟ್ ಅಂಡ್ ಡಿಸ್ಟೆಂಪರ್ ವಾಶ್, (56) ಹಿಟ್ಟುರುಬ್ಬುವ ಯಂತ್ರ (Tailoring), (57) ಟಾಂಗಾ (ಜಟಕಾ ಗಾಡಿ), (58) ವಾಚ್ ರಿಪೇರಿ (ಗಡಿಯಾರ ರಿಪೇರಿ), (59) ಹಿಟ್ಟು ರುಬ್ಬುವ ಯಂತ್ರ (Wet Grinding Machine), (60) ವೆಲ್ಡಿಂಗ್ ಮೆಶಿನ್, (61) ಜೆರಾಕ್ಸ್ ಮೇಶೀನ್, (62) ಸೌಂಡ್ ಸಿಸ್ಟಮ್.

**ವ್ಯಾಪಾರ:** (1) ಅಡಿಕೆ ವ್ಯಾಪಾರ, (2) ಆಟೋ, ಟೆಂಪೊ, (3) ಬೇಕರಿ, (4) ವೀಳ್ಯೆದೆಲೆ ವ್ಯಾಪಾರ, (5) ಪಾದರಕ್ಷೆಗಳ ವ್ಯಾಪಾರ (6) ಬ್ರಾಸ್ ಮತ್ತು ಅಲ್ಯೂಮಿನಿಯಂ ಮಾರಾಟ, (7) ಕಲೆಕ್ಷನ್ ಆಫ್ ನಾನ್-ಎಡಿಮಲ್ ಸೀಡ್ಸ್, (8) ಗೋಡಂಬಿ ಮಾರಾಟ, (9) ಬಟ್ಟೆ ವ್ಯಾಪರ, (10) ತಂಪಾದ ಪಾನೀಯಗಳ ಮಾರಾಟ (ಕೂಲ್ ಡ್ರಿಂಕ್ಸ್), (11) ಕಾರ್ಪೇಟ್ ಮಾರಾಟ, (12) ಕಾನ್‌ಟ್ರಾಕ್ಸ್ ವರ್ಕ್, (13) ತೆಂಗಿನಕಾಯಿ ಮಾರಾಟ, (14) ಕಾಫೀ ಪೌಡರ್ ಮಾರಾಟ, (15) ಡೈರಿ, (16) ಒಣಗಿದ ಮೀನು ಮಾರಾಟ, (14) ಕಾಫೀ ಪೌಡರ್ ಮಾರಾಟ, (15) ಡೈರಿ, (16) ಒಣಗಿದ ಮೀನು ಮಾರಾಟ (17) ಮೊಟ್ಟೆ ವ್ಯಾಪಾರ, (18) ಎಲೆಕ್ಟ್ರಿಕಲ್ ಎಕ್ಸಿಪ್‌ಮೆಂಟ್ ಶಾಪ್, (19) ಫ್ಯಾನ್ಸಿ ಸ್ಟೋರ್ (ಬಳೆ ಅಂಗಡಿ), (20) ಫಿಶಿಂಗ್ ಸ್ಟೋರ್ (ಮೀನಿನ ಅಂಗಡಿ), (21) ಫಿಶಿಂಗ್ ನೆಟ್, (22) ಹೂವಿನ ಮಾರಾಟ, (23) ಹಣ್ಣು ಮತ್ತು ತರಕಾರಿ ಮಾರಾಟ, (24) ಫರ್ನಿಚರ್ ಮಾರಾಟ, (25) ಗೋಣಿಚೀಲ ಮಾರಾಟ (ಗನ್ನಿ ಬ್ಯಾಗ್ ಸೆಲ್ಲಿಂಗ್), (26) ಹಾರ್ಡ್‌ವೇರ್ ಶಾಪ್ (ಕಬ್ಬಿಣದ ಅಂಗಡಿ), (27) ಸೌಂಡ್ ಸಿಸ್ಟಂ ಮತ್ತು ಮದುವೆ ಸಾಮಾಗ್ರಿಗಳು, (28) ಕರಕುಶಲ ವಸ್ತಗಳು, (29 ಹೋಟೆಲ್ ಮತ್ತು ಟೀ ಸ್ಟಾಲ್, (30) ಹಳೆ ಸ್ಟೀಲ್ ಮತ್ತು ಕಬ್ಬಿಣದ ವಸ್ತಗಳು ಸಂಗ್ರಹ, (31) ಜಾಬ್ ಟೈಪಿಂಗ್‌ಮತ್ತು ಡೂಪ್ಲಿಕೇಟಿಂಗ್, (32) ಬೀಗದ ಕೈ ರಿಪೇರಿ (ಲಾಕ್ ರಿಪೇರಿಂಗ್‌ಳ, (33) ಮೋಟಾರ್ ಬಿಡಿ ಭಾಗಗಳ ಅಂಗಡಿ (ಸ್ಪೇರ್ ಪಾರ್ಟ್ಸ್), (34) ಮಾಂಸದ ಅಂಗಡಿ, (35) ಮೆಡಿಕಲ್ ಶಾಪ್ (ಔಷಧಿ ಅಂಗಡಿ), (36) ನ್ಯೂಸ್ ಪೇಪರ್ ಏಜೆನ್ಸಿ, (37) ಹಳೇ ವಸ್ತುಗಳ ವ್ಯಾಪಾರ, (38) ಪಾನಿಪುರಿ ಅಂಗಡಿ, (39) ಪಾನ್ ಮತ್ತು ಬೀಡಾ ಅಂಗಡಿ, (40) ಚಿಲ್ಲರೆ ಅಂಗಡಿ (ಪೆಟ್ಟಿ ಶಾಪ್), (41) ಪ್ಲಾಸ್ಟಿಕ್ ವಸ್ತುಗಳ ಮಾರಾಟ, (42) ದಿನಸಿ ಅಂಗಡಿ, (ಪ್ರಾವಿಶನ್





ಸ್ಟೋರ್ಸ್), (43) ಕಲ್ಲು ಕತ್ತರಿಸುವ ಯಂತ್ರ, (44) ಸಿಲ್ಕ್ ವೀವಿಂಗ್, (ರೇಶ್ಮೆ ನೇಯ್ಗೆ), (45) ಸಾಂಬಾರ್ ಪದಾರ್ಥ ಮತ್ತು ಕಾಳುಗಳ ಮಾರಾಟ, (46) ಸ್ಟೆನ್‌ಲೆಸ್ ಸ್ಟೀಲ್ ಮಾರಾಟ, (47) ಕಬ್ಬಿನ ಹಾಲಿನ ಮಾರಾಟ, (48) ಹೊಲಿದ ಬಟ್ಟೆಗಳ ಮಾರಾಟ, (49) ರಿಟೈಲ್/ಕಿರಣಾ, (50) ಕಚ್ಚಾವಸ್ತುಗಳ ಸಗಟು ಮಾರಾಟ, (51) ಸ್ವೀಟ್ ಸ್ಟಾಲ್ (ಸಿಹಿ ವಸ್ತುಗಳ ಮಾರಾಟ), (52) ಸ್ಟೇಶನರಿ ಶಾಪ್, (53) ಶಿಲ್ಪಕಲಾ, (54) ಚಪ್ಪಲಿ ಮಾರಾಟ, (55) ತಳ್ಳುಗಾಡಿ,

**ಹೈನುಗಾರಿಕೆ :** (1) ಎಮ್ಮೆ ಸಾಗಾಣಿಕೆ, (2) ಪಶು ಸಂಗೋಪನೆ (3) ಕ್ರಾಸ್ ಬ್ರೀಡ್ ಹಸುಗಳು, (4) ಹಂದಿ ಸಾಗಾಣಿಕೆ, (5) ಕೋಳಿ ಸಾಗಾಣಿಕೆ.

**ವ್ಯವಸಾಯ:** (1) ಕೃಷಿ ಸಾಮಾಗ್ರಿಗಳು, (2) ಫರ್ಟಿಲೈಸರ್ಸ್ ಮತ್ತು ಸೀಡ್ಸ್ , (3) ಲಿಫ್ಟ್ ಇರಿಗೇಷನ್, (4) ಮಲ್ಬರಿ ಕಲ್ಟಿವೇಶನ್, (5) ಪಂಪ್‌ಸೆಟ್ಸ್ (6) ಸಿರಿಕಲ್ಚರ್

**ಇತರ ಯೋಜನೆಗಳು:** (1) ಟೈಪ್ ರೈಟಿಂಗ್ ಸ್ಕೂಲ್ಸ್/ಇನ್‌ಸ್ಟಿಟ್ಯೂಟ್, (2) ಟ್ರಾವಲ್ ಏಜೆನ್ಸಿ, (3) ಲಘು ಉಪಕರಣ/ಪೋರ್ಟಬಲ್ ವೆಲ್ಡಿಂಗ್ ಎಕ್ವಿಪ್‌ಮೆಂಟ್ಸ್, (4) ಸೌಂಡ್ ಸಿಸ್ಟಂ /ಪಬ್ಲಿಕ್ ಅಡ್ರೆಸ್ ಸಿಸ್ಟಂ, (5) ಡೆಕೊರೇಟಿವ್ ಲೈಟಿಂಗ್/ಲ್ಯಾಂಪ್ಸ್ ವಿತ್ ಮ್ಯೂಸಿಕ್ ಬ್ಯಾಂಡ್ಸ್ ಫಾರ್ ಹೈರ್, (6) ಫುಡ್/ಟೀ/ಕಾಫೀ ವೆಂಡಿಂಗ್ ಕಿಯೋಸ್ಕ್ಸ್, (7) ಮತೀಯ ಅಲ್ಪಸಂಖ್ಯಾಯ ಜನರು ಅವಲಂಬಿಸುವ ಇತರೆ ಯೋಜನೆಗಳಿಗೆ, ಕಾಲ ಕಾಲಕ್ಕೆ ನಿಗದಿ ಪಡಿಸಿದ ಹಣಕಾಸಿನ ಮಿತಿಯೊಳಗೆ ಸಾಲ ಸೌಲಭ್ಯ ಒದಗಿಸಲಾಗುವುದು.

**ಸಾಲ ಮಂಜೂರಾತಿ ವಿಧಾನ:** ಸಾಲ ಪಡೆಯಲು ಬಯಸುವ ಅಲ್ಪಸಂಖ್ಯಾಯತ ಅರ್ಜಿದಾರರು ನಿಗಮವು ನಿಗದಿ ಪಡಿಸಿದ ಉಚಿತ ಸಾಲದ ಅರ್ಜಿಗಳನ್ನು ಆಯಾ ಜಿಲ್ಲೆಯಿ ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಇಲಾಖೆಯ ಜಿಲ್ಲಾ ಅಧಿಕಾರಿಗಳು ಕಛೇರಿಯಿಂದ ಪಡೆದು ಪೂರ್ಣ ವಿವರಗಳೊಂದಿಗೆ ಅರ್ಜಿ ಭರ್ತಿ ಮಾಡಿ ಜಾತಿ ಮತ್ತು ಆದಾಯ ದೃಢೀಕರಣ ಪತ್ರ, ಯೋಜನಾವರದಿ ಮತ್ತು ವಾಸಸ್ಥಳದ ಬಗ್ಗೆ ಅರ್ಜಿಯಲ್ಲಿ ತಿಳಿಸಿರುವಂತೆ ಲಗತ್ತಿಸಿ ಸದರೀ ಕಛೇರಿಗೆ ಸಲ್ಲಿಸಬೇಕು. ಈ ಅರ್ಜಿಗಳನ್ನು ಸಾಲ ಮಂಜೂರಾತಿಗೆ ಶಿಫಾರಸ್ಸು ಮಾಡಲಾಗುತ್ತದೆ. ಬ್ಯಾಂಕ್/ಹಣಕಾಸು ಸಂಸ್ಥೆ/ಸಹಕಾರ ಸಂಘಗಳಿಗೆ ಅರ್ಜಿಗಳನ್ನು ಸಾಲ ಮಂಜೂರಾತಿಗಾಗಿ ಶಿಫಾರಸ್ಸು ಮಾಡಲಾಗುತ್ತದೆ. ಬ್ಯಾಂಕ್/ಹಣಕಾಸು ಸಂಸ್ಥೆಗಳು ಮಂಜೂರಾತಿ ಮಾಡಿ ಪ್ರಸ್ತಾವನೆ ಕಳಿಸಿದ ನಂತರ, ಜಿಲ್ಲಾ ಸಮಿತಿಯ ಅನುಮೋದನೆ ಪಡೆದುಕೊಂಡು ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಕಳುಹಿಸಿದ ಪ್ರಸ್ತಾವನೆಗಳನ್ನು ಪರಿಗಣಿಸಿ ಮಾರ್ಜಿನ್ ಹಣ/ಸಹಾಯ ಧನ ಸಾಲವನ್ನು ಮಂಜೂರು ಮಾಡಲಾಗುತ್ತದೆ.

ಅಲ್ಪಸಂಖ್ಯಾತ ಜನರಿಗೆ ಹಾಗೂ ಸಂಘ ಸಂಸ್ಥೆಯ ಸದಸ್ಯರಿಗೆ ಈ ಕೆಳಕಂಡ ಯೋಜನೆಗಳಿಗೆ ನಿಗಮವು ಸಾಲ ಮಂಜೂರು ಮಾಡಲಾಗುತ್ತದೆ.

**ಕೈಗಾರಿಕೆಗಳು :** (1) ಅಗರಬತ್ತಿ ತಯಾರಿಕೆ, (2) ಆಯುರ್ವೇದ ಔಷಧ ತಯಾರಿಕೆ, (3) ಆಡಿಯೋ ಕ್ಯಾಸೆಟ್ ಅಸೆಂಬ್ಲಿ (ಅಳವಡಿಕೆ), (4) ಕೃತಕ ಮುತ್ತುಗಳಿ ತಯಾರಿಕೆ, (5) ಆಟೋ ಸೀಟ್ ಕವರ್ ತಯಾರಿಕೆ, (6) ವಿದ್ಯುದ್ದೀಪಗಳ ಜೋಡಣೆ, (7) ಅಲ್ಯೂಮಿನಿಯಂ ಪಾತ್ರೆಗಳ ತಯಾರಿಕೆ, (8) ಏರೆಯೇಟಡ್ ವಾಟರ್ಸ್ ತಯಾರಿಕೆ, (9) ಕೃತಕ ಸಾಂಬ್ರಾಣಿ, (10) ಹಾಸಿಗಳ ತಯಾರಿಕೆ, (11) ಇಟ್ಟಿಗೆಗಳ ತಯಾರಿಕೆ, (12) ಬಯೋ ಗ್ಯಾಸ್ ತಯಾರಿಕೆ, (13) ದೋಣಿ ತಯಾರಿಕೆ, (14) ಬ್ಯಾಟರಿ ಎಲಿಮಿನೇಟರ್, (15) ಬೀಡಿ ತಯಾರಿಕೆ, (16) ಬಾಲ್‌ಪೆನ್ ತಯಾರಿಕೆ, (17) ಬ್ಲೋ ಮೌಲ್ಡೆಡ್ ಟಾಯ್ಸ್ ಮತ್ತು ಕಂಟೇನರ್ಸ್, (18) ಬಯೋಲಾಜಿಕಲ್

ಮಾಡೆಲ್ಸ್, (19) ಬರ್ನ್‌ಟ್ ಲೈಮ್, (20) ಕಸಬರಿಕೆ ತಯಾರಿಕೆ, (21) ಬುಟ್ಟಿತಯಾರಿಕೆ, (22) ಮೋಂಬತ್ತಿ ತಯಾರಿಕೆ, (23) ಚೌಲಿ ತಯಾರಿಕೆ, (25) ತಾಮ್ರ ಮತ್ತು ಹಿತ್ತಾಳೆ ಸಾಮಾನುಗಳ ತಯಾರಿಕೆ, (26) ಕಲ್ಲಿದ್ದಲು ಸ್ಟೋವ್/ಇಂಪ್ರೋವ್ಡ್ ಸೌದೆ, ಒಲೆ, (27) ಕಮರ್ಷಿಯಲ್ ಗ್ಲೇಡ್, (ಪಿಸಿಇ), (28) ಕಂಪೋನೆಂಟ್ ಅಸೆಂಬ್ಲಿ (29) ಕಾರ್ಡ್ ಬೋರ್ಡ್ ಕಾರ್ಟೂನ್ಸ್, (30) ಕರ್ಪೂರದ ಬಿಲ್ಲೆಗಳು ತಯಾರಿಕೆ, (31) ಕ್ಲೀನಿಂಗ್ ಪೌಡರ್, (32) ಮಣ್ಣಿನ ಆಟಿಕೆಗಳ ತಯಾರಿಕೆ (ಕ್ಲೇ ಟಾಯ್ಸ್)(Clay Toys), (33) ಕಲ್ಲಿನ ಕೆತ್ತನೆ ಶಿಲ್ಪಗಳ ತಯಾರಿಕೆ (Carved Statue Stone), (34) ಕಂಟ್ರಿಬ್ರಿಕ್ಸ್ (35) ಸಿಮೆಂಟ್ ಹಾಲೋ ಬ್ಲಾಕ್ಸ್‌ಸಾಯಿಲ್ ಸಿಮೆಂಟ್ ಬ್ಲಾಕ್ಸ್ , (37) ಸಿಮೆಂಟೆಡ್ ಚಪ್ಪಲ್ಸ್ (38) ಮಕ್ಕಳ ಹಾಲೋ ಬ್ಲಾಕ್ಸ್‌ಸಾಯಿಲ್ ಸಿಮೆಂಟ್ ಬ್ಲಾಕ್ಸ್ (39) ಕಾಲಿನ ಚೆಂಡು ತಯಾರಿಕೆ (Football) (39) ಮಕ್ಕಳ ಕ್ರಿಕೆಟ್ ಬಾಲ್ ತಯಾರಿಕೆ (Children Cricket Ball) (40) ತಂಬಾಕು ತಯಾರಿಕೆ, (41)ಚುಯಿಂಗ್ ಲೈಮ್, (42) ಕಾಯರ್ ಡೋರ್ ಮ್ಯಾಟ್ಸ್ (43) ಕಾಟನ್ ಕ್ಯಾಂಡಿ, (44) ಕಾಂಕ್ರೀಟ್ ಜೆಲ್ಲಿಕ್ಯಾಂಟ್ಸ್ (45) ಸೈಕಲ್ ಸೀಟ್ ಕವರುಗಳ ತಯಾರಿಕೆ, (46) ಗಾಡಿ ತಯಾರಿಕೆ, (47) ಡೆಕೋ ನಿಯಾನ್ ಲ್ಯಾಂಪ್ಸ್ (48) ಡೆಸ್ಕ್ ಡೈರಿ ಕ್ಯಾಲೆಂಡರ್, (49) ಡಿಸ್ಟಿಲ್ ವಾಟರ್, (50) ಡಿಯೊಎಡ್ರೆಂಟ್ಸ್, (51) ಡಿಸ್ಟೆಂಪರ್, (52) ಡೈರಿ ಮಿಲ್ಕ್ ಉತ್ಪನ್ನಗಳು, (53) ಎಲೆಕ್ಟ್ರಾನಿಕ್ ಫ್ಯಾನ್ ರೆಗ್ಯೂಲೇಟರ್ ಷಂಡ್ ಲೈಟ್ ಡಿಮ್ಮರ್ಸ್ 54) ಲಕೋಟೆ ತಯಾರಿಕೆ, (55) ಎಲೆಕ್ಟ್ರಾನಿಕ್ ಕರೆಗಂಟೆ, (56) ಫೈಲ್ಸ್‌ಕವರ್ಸ್ (57) ಫೈಬರ್ ಗ್ಲಾಸ್, (58) ಗೋಬರ್ ಗ್ಯಾಸ್, (59) ಜೆಮ್ ಕ್ಲಿಪ್ಸ್ (60) ಹ್ಯಾಂಡ್‌ಲೂಮ್ ಇಂಡಸ್ಟ್ರೀಸ್, (61) ಹಾರ್ಮೋನಿಯಂ ತಯಾರಿಕೆ, (62) ಹ್ಯಾಂಡ್‌ಬ್ಯಾಗ್ಸ್ ಫ್ರಮ್ ಪ್ಲಾಸ್ಟಿಕ್ ಊವನ್ ಕ್ಲಾತ್, (63) ಹೌಸ್‌ಹೋಲ್ಡ್ (ಡ್ರೈ ಅಂಡ್ ವೆಟ್ ಗ್ರೈಂಡರ್ಸ್), (64) ಇಂಡಸ್ಟ್ರಿಯಲ್ ಹ್ಯಾಂಡ್ ಗೌಸ್ಲ್ ಹ್ಯಾಂಡ್ ಲೂಮ್, (65) ಐಸ್‌ಕ್ರಿಮ್/ ಕ್ಯಾಂಡಿ, (66) ಇನ್‌ವರ್ಟರ್‌ಗಳು ಮತ್ತು ಎವರ್‌ಜೆನ್ಸಿ (67) ಕುಂಕುಮ ಪೌಡರು ಮತ್ತು ಕಾಡಿಗೆ, (68) ಕೀ ಚೈನ್ಸ್ (69) ಕುಚ್ಚುತಯಾರಿಕೆ (ಮಹಿಳೆಯರಿಗೆ), (70) ಲೈಟ್ ಫ್ಯಾಬ್ರಿಕೇಶನ್ ಶಾಪ್, (71) ಲೆನ್ಸ್‌ಗ್ರೈಂಡಿಂಗ್, (72) ಮೆಟಲ್ ಪಾಲಿಶ್, (73) ಮಸಾಲೆಪುಡಿ ತಯಾರಿಕೆ, (74) ಮುಖ/ಹಲ್ಲುಪುಡಿ ತಯಾರಿಕೆ, (75) ನೈಲಾನ್ ಕಾಲುಚೀಲ ತಯಾರಿಕೆ, (76) ಪೇಂಟ್ಸ್ (77) ಪರ್‌ಫ್ಯೂಮ್ ತಯಾರಿಕೆ (ಸುಗಂಧ ದ್ರವ್ಯ ತಯಾರಿಕೆ), (78) ಪಿ.ವಿ.ಸಿ. ವೆಲ್ಡೆಡ್ ಆರ್ಟಿಕಲ್ಸ್ (79) ಉಪ್ಪಿನಕಾಯಿ ಮತ್ತು ಚಟ್ನಿಗಳು, (80) ಪಾಪಡ್ (ಹಪ್ಪಳ ತಯಾರಿಕೆ), (81) ಪಾಪ್‌ಕಾರ್ನ್/ ಅವಲಕ್ಕಿ/ ಚುರುಮುರಿ ತಯಾರಿಕೆ, (82) ರೇಡಿಯೋ ಅಸೆಂಬ್ಲಿ (83) ರನ್ನಿಂಗ್ ಲೈಟ್ ಡಿಸ್ಪ್ಲೇ, (84) ರೀ ಪ್ಯಾಕ್ಡ್ ಕೆಮಿಕಲ್ಸ್ (85) ರೆಡಿ ಮಿಕ್ಸೆಡ್ ಮೋರ್ಟರ್, (86) ಸ್ಟೀಲ್ ಫರ್ನಿಚರ್ (ಅಂಟು), (87) ಸ್ಟೀಲ್ ಟ್ರಂಕ್ಸ್ (88) ಸೆಂಟೆಂಡ್ ರಬ್ಬರ್ಸ್ (Scented Erasers), (89) ಸೋಪ್ ನಟ್ ಪೌಡರ್, (90) ಸ್ಟಿಕ್ಕರುಗಳ ತಯಾರಿಕೆ, (91) ಸ್ಯಾನಿಟರಿ ನ್ಯಾಪಕಿನ್‌ಗಳು), (92) ಶೂ ಪಾಲಿಶ್, (93) ಸಿಂಥೆಟಿಕ್ ಗಮ್, (94) ಸ್ಲೇಟ್, ಪೆನ್ಸಿಲ್‌ಗಳು, (95) ಸೋಪ್ ಸ್ಟೋನ್ ವೆಸೆಲ್ಸ್ (Soapstone Vessels), (96) ಶಟಲ್‌ಕಾಕ್, (97) ಸ್ಕೂಲ್ ಬ್ಯಾಗ್‌ಗಳು ತಯಾರಿಕೆ, (98) ಸೆಂಟೆಡ್ ಸುಪಾರಿ, (99) ಸ್ಮಾಲ್ ಸ್ಕೇಲ್ ಇಂಡಸ್ಟ್ರಿ (102) ಟಿನ್ ತಯಾರಿಕೆ, (103) ಟಿವಿ ಅಂಟೆನಾ, (104) ಛತ್ರಿ ಅಳವಡಿಸುವಿಕೆ, (Umbrealla Assembly) (105) ಟ್ರಾನ್ಸಿಸ್ಟರ್ ರೇಡಿಯೋ ಕವರುಗಳು, (106) ವೆಸ್ಟ್ ಮತ್ತು ಬ್ರೀಫ್‌ಗಳ ತಯಾರಿಕೆ (ಬನಿಯನ್ ಮತ್ತು ಕಾಚಗಳ ತಯಾರಿಕೆ) (107) ವುಡನ್ ಟಾಯ್ಸ್ (ಮರದ ಆಟಿಕೆಗಳು/ಎಲೆಕ್ಟ್ರಿಕ್ಕಲ್ ಆಕ್ಸೆಸ್ಸರೀಸ್) ಪ್ಯಾಕಿಂಗ್ ಕ್ರಾಫ್ಟ್ (108) ಬ್ರಶ್ (ಕಾಯಿಲ್ ಅಂಡ್ ವೈರ್).

**ಫ್ಯಾಶನ್ ಡಿಸೈನಿಂಗ್:** ನಿಗಮವು ಮಹಿಳೆಯರಿಗಾಗಿ ಫ್ಯಾಶನ್ ಡಿಸೈನಿಂಗ್‌ದಲ್ಲಿ ಮಾದರಿಯ ಯೋಜನೆಯನ್ನು ಹಮ್ಮಿಕೊಂಡಿದೆ. ತರಬೇತಿಯ 6 ರಿಂದ 9 ತಿಂಗಳವರೆಗೆ ಇರುತ್ತದೆ ಮತ್ತು ಆಯ್ಕೆಯಾದ ಅಭ್ಯರ್ಥಿಗಳಿಗೆ ಪ್ರಖ್ಯಾತ ಫ್ಯಾಶನ್ ಡಿಸೈನಿಂಗ್ ಸಂಸ್ಥೆಗಳಲ್ಲಿ ತರಬೇತಿ ನೀಡಲಾಗುವುದು. ವಿದ್ಯಾರ್ಹತೆ :





ಎಸ್.ಎಸ್.ಎಲ್.ಸಿ./ಪಿ.ಯು.ಸಿ. ಅಥವಾ ವಿದ್ಯಾವಂತ ನಿರುದ್ಯೋಗಿ ಮಹಿಳೆಯರು ಹಾಗೂ ವಿಧವೆಯರಿಗೆ ಪ್ರಾಮುಖ್ಯತೆ ನೀಡಲಾಗುತ್ತದೆ.

ಇಚ್ಛೆಯುಳ್ಳ ಹಾಗೂ ಅವಶ್ಯಕತೆಯಿರುವ ಮತೀಯ ಅಲ್ಪ ಸಂಖ್ಯಾತರಿಗೆ ಈ ತರಬೇತಿಗಳನ್ನು ನೀಡಲಾಗುವುದು ಟಿಂಕರಿಂಗ್, ವೆಲ್ಡಿಂಗ್, ಫಿಟ್ಟರ್, ಟರ್ನರ್, 1 ಅಥವಾ 2. ವರ್ಷಗಳು ಡೀಸಲ್/ಪೆಟ್ರೋಲ್ ಮೆಕಾನಿಕ್ಸ್ ಮತ್ತು ಉನ್ನತ ದರ್ಜೆಯ ವಾಹನಗಳ ಮೆಕಾನಿಕ್ಸ್ ಹಾಗೂ ಹೆಚ್.ಜಿ.ವಿ. ತರಬೇತಿ, ಅಡಿಗೆ ಮತ್ತು ಬೇಕರಿ.

## III. ಗಂಗಾ ಕಲ್ಯಾಣ ನೀರಾವರಿ ಯೋಜನೆ (ಸಾಮೂಹಿಕ ನೀರಾವರಿ ಯೋಜನೆ) :

ರಾಜ್ಯದಲ್ಲಿ ಶಾಶ್ವತವಾಗಿ ಲಭ್ಯವಿರುವ ಜಲ ಸಂಪನ್ಮೂಲಗಳನ್ನು (ನದಿಗಳು) ಬಳಸಿಕೊಂಡು ಪೈಪ್‌ಲೈನ್ ಮುಖಾಂತರ ಏತ ನೀರಾವರಿ ಯೋಜನೆಯ ಮೂಲಕ ಜಮೀನಿಗೆ ಸಾಮೂಹಿಕ ನೀರಾವರಿ ಸೌಲಭ್ಯ ಒದಗಿಸಲಾಗುವುದು ಮತ್ತು ಎಲ್ಲಿ ಶಾಶ್ವತ ಜಲ ಸಂಪನ್ಮೂಲಗಳು ಲಭ್ಯವಿಲ್ಲವೋ ಅಂತಹ ಕಡೆಗಳಲ್ಲಿ ತಜ್ಞ ಭೂ ವಿಜ್ಞಾನಿಗಳಿಂದ ಜಲ ಬಿಂದುಗಳನ್ನು ಗುರುತಿಸಿ ಕೊಳವೆ ಬಾವಿಗಳನ್ನು ಕೊರೆಯಿಸಲಾಗುವುದಲ್ಲದೆ, ವಿದ್ಯುಚ್ಛಕ್ತಿ ಪೈಪುಗಳು ಅಳವಡಿಕೆ, ನೀರು ಸಂಗ್ರಹಣೆಗೆ ಟ್ಯಾಂಕ್ ನಿರ್ಮಾಣ ಮಾಡಿಕೊಡಲಾಗುವುದು. ಈ ಯೋಜನೆಯನ್ನು ಕಾರ್ಯಗತಗೊಳಿಸಿ 5 ವರ್ಷಗಳ ಕಾಲ ನಿಗಮದ ವೆಚ್ಚದಲ್ಲಿಯೇ ನಿರ್ವಹಣೆ ಮಾಡಿ, ನಂತರ ಫಲಾನುಭವಿಗಳ ಜನ ಬಳಕೆದಾರರ ಸಂಘಕ್ಕೆ ವಹಿಸಿಕೊಡಲಾಗುವುದು. ಹೆಚ್ಚಿನ ಇಳುವರಿ ಪಡೆದುಕೊಳ್ಳುವ ವ್ಯವಸ್ಥೆ ಒದಗಿಸಲಾಗುವುದು. ಈ ಯೋಜನೆಯನ್ನು ಸರಿಯಾಗಿ ನಿರ್ವಹಣೆಯನ್ನು ಸುಗಮವಾಗಿ ನೋಡಿಕೊಂಡು ಹೋಗಲು ಅನುಕೂಲವಾಗುವಂತೆ ಪ್ರೇರಕರನ್ನು ನೇಮಿಸಲಾಗುವುದು. ಈ ಯೋಜನೆಯು ಸಂಪೂರ್ಣವಾಗಿ ಸಹಾಯಧನ ಯೋಜನೆಯಾಗಿರುತ್ತದೆ.

**ವೈಯಕ್ತಿಕ ಕೊಳವೆ ಬಾವಿ ಯೋಜನೆ :** ಸಂಬಂಧಪಟ್ಟ ಜಿಲ್ಲಾ ಅಧಿಕಾರಿಗಳ ಕಛೇರಿಯಿಂದ ಆಯ್ಕೆಗೊಂಡ 2 ರಿಂದ 5 ಎಕರೆ ಜಮೀನು ಹೊಂದಿರುವಂತಹ ಫಲಾನುಭವಿಗಳಿಗೆ ಒಂದು ಕೊಳವೆ ಬಾವಿಯನ್ನು ಕೊರೆದು ಪಂಪ್‌ಸೆಟ್ಟನ್ನು ಸರಬರಾಜು ಮಾಡಲಾಗುವುದು. ಸರ್ಕಾರದ ಆದೇಶದ ಪ್ರಕಾರ ಒಟ್ಟು ಮೊತ್ತ ರೂ. 1,00,000/–ಗಳು ಮೀರಬಾರದು. ವಿದ್ಯುದೀಕರಣ ಮತ್ತು ಇತರೆ ವೆಚ್ಚಗಳನ್ನು ಫಲಾನುಭವಿಗಳೇ ಭರಿಸಬೇಕು.

### ಯೋಜನೆಯ ಮುಖ್ಯಾಂಶಗಳು (ಸಾಮೂಹಿಕ ನೀರಾವರಿ ಯೋಜನೆ) :

(1) ಸೌಲಭ್ಯ ಪಡೆಯುವ ಫಲಾನುಭವಿಗಳು ಸರ್ಕಾರಿ ಆದೇಶದ ಪ್ರಕಾರ ಅಲ್ಪಸಂಖ್ಯಾತ ವರ್ಗಗಳಿಗೆ ಸೇರಿದವರಾಗಿರಬೇಕು.

(2) ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.

(3) ಸಣ್ಣ ಮತ್ತು ಅತೀ ಸಣ್ಣ ರೈತರಾಗಿರಬೇಕು.

(4) ಕುಟುಂಬದ ವಾರ್ಷಿಕ ವರಮಾನವು 22,000 ರೂ.ಗಳನ್ನು ಮೀರಿರಬಾರದು.

(5) ವ್ಯವಸಾಯ ವೃತ್ತಿಯನ್ನು ಅವಲಂಬಿಸಬೇಕು. ಹಾಗೂ ಬೇರೆ ಯಾವುದೇ ತರಹದ ನೀರಾವರಿ ಸೌಲಭ್ಯ ಒದಗಿಸಲಾಗುವುದು.

(6) ಕನಿಷ್ಠ 3 ರಿಂದ 5 ಜನ ರೈತರುಗಳು ಸೇರಿ ಒಂದೇ ಕಡೆ 8 ಎಕರೆ ಜಮೀನಿಗೆ 2 ಕೊಳವೆಬಾವಿ ಹಾಗೂ 15 ಎಕರೆ ಜಮೀನಿಗೆ 3 ಕೊಳವೆಬಾವಿಗಳನ್ನು ಕೊರೆದು ಪಂಪಸೆಟ್ ಅಳವಡಿಸಿ ನೀರಾವರಿ ಸೌಲಭ್ಯ ಒದಗಿಸಲಾಗುವುದು.

(7) ಗಂಗಾ ಕಲ್ಯಾಣ ಯೋಜನೆಯ ಘಟಕ ವೆಚ್ಚಕ್ಕೆ ಒಳಪಟ್ಟು ಹಾಗೂ ನೀರಾವರಿ ಇಲಾಖೆಯ ಪೂರ್ವಾನುಮತಿ ಪಡೆದು ಸಾಮೂಹಿಕ 'ಏತ' ನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

**ಮಹಿಳೆಯರಿಗೆ ಆದ್ಯತೆ:** ಸರ್ಕಾರದ ಆದೇಶದನ್ವಯ, ನಿಗಮವು ಅನುಷ್ಠಾನಗೊಳಿಸುತ್ತಿರುವ ಸಾಲದ ಯೋಜನೆಗಳು ಸಹಾಯಧನ ಯೋಜನೆ ತರಬೇತಿ ಯೋಜನೆಗಳಲ್ಲಿ ಶೇ. 331/2ರಷ್ಟು ಪ್ರಯೋಜನವನ್ನು ಮಹಿಳೆಯರಿಗೆ ದೊರೆಕಿಸಿಕೊಡಲು ಕಾರ್ಯಕ್ರಮ ರೂಪಿಸಲಾಗಿರುತ್ತದೆ.

**ಸೂಚನೆ:** ಮತೀಯ ಅಲ್ಪ ಸಂಖ್ಯಾತರ ಜನರುಗಳ ಏಳಿಗೆಗಾಗಿ ಹಾಗೂ ಅಭಿವೃದ್ಧಿಗಾಗಿ ಯೋಜನೆಗಳಲ್ಲಿ ಸೌಲಭ್ಯಗಳನ್ನು ಪಡೆಯಬಯಸುವ ಅಲ್ಪ ಸಂಖ್ಯಾತ ಜನರು ಆಯಾ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ಇಲಾಖೆಯಲ್ಲಿ ಸಂಪರ್ಕಿಸಿಲು ಕೋರಲಾಗಿದೆ.

**1. ಮಾಂಗಲ್ಯ ಭಾಗ್ಯ ಯೋಜನೆ:** ಸರ್ಕಾರಿ ಆದೇಶ ಸಂಖ್ಯೆ : ಸಕಇ ಬಿಸಿಎ 97 ಬೆಂಗಳೂರು, ದಿನಾಂಕ : 10-01-1999 ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಇವರುಗಳು ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತ ವರ್ಗಗಳ ಅಭಿವೃದ್ಧಿಗಾಗಿ 'ಮಾಂಗಲ್ಯ ಭಾಗ್ಯ' ಯೋಜನೆಯನ್ನು 1998-99ನೇ ಸಾಲಿನಿಂದ ಈ ಕೆಳಕಂಡ ಷರತ್ತಿಗಳಿಗೆ ಒಳಪಟ್ಟು ಅನುಷ್ಟಾನಗೊಳಿಸಲು ಸರ್ಕಾರ ಮಂಜೂರಾತಿ ನೀಡಿದೆ:-

(1) ಈ ಯೋಜನೆಯನ್ನು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಮುಖಾಂತರ ಅನುಷ್ಠಾನಗೊಳಿಸತಕ್ಕದ್ದು;

(2) ಫಲಾನುಭವಿಗೆ ರೂ. 5,000ಗಳನ್ನು ಮಾತ್ರ ಸಹಾಯಧನವನ್ನಾಗಿ ನೀಡತಕ್ಕದ್ದು;

(3) ಹಿಂದುಳಿದ ವರ್ಗಗಳ ಪ್ರವರ್ಗ-1 ಮತ್ತು ಪ್ರವರ್ಗ -2 ರಲ್ಲಿನ ಜಾತಿಗೆ ಸೇರಿದ ಮತ್ತು ಇತರೆ ಅಲ್ಪಸಂಖ್ಯಾತರಿಗೆ ಮಾತ್ರ ಈ ಸೌಲಭ್ಯವನ್ನು ನೀಡತಕ್ಕದ್ದು.

(4) ಫಲಾನುಭವಿ ಹಾಗೂ ಅವರ ಕುಟುಂಬದವರ ವಾರ್ಷಿಕ ವರಮಾನವು ರೂ. 22,000 ಗಳಿಗಂತ ಕಡಿಮೆ ಇರತಕ್ಕದ್ದು.

**ವಿಷಯ:** ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಸಾಲ ಸೌಲಭ್ಯ ಹಾಗೂ ಎಲ್ಲಾ ಯೋಜನೆಗಳಲ್ಲಿ ಸೌಲಭ್ಯ ಪಡೆಯಲು ನಿಗಧಿಪಡಿಸಿದ ವಾರ್ಷಿಕ ಆದಾಯ ಮಿತಿಯನ್ನು ಪರಿಷ್ಕರಿಸುವ ಬಗ್ಗೆ.

**ಓದಲಾಗಿದೆ:** (1) ಸರ್ಕಾರಿ ಆದೇಶ ಸಂಖ್ಯೆ : ಸಕಕಾ 42 ಬಿಸಿಎ 92 ದಿನಾಂಕ : 18-07-96

(2) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಇವರ ಪತ್ರ ಸಂ:ಕಹಿನಿ:ಜೈ.ಸಾ:ಆದಾಯಮಿತಿ:ಸಿಆರ್ 1:99-2000 ದಿನಾಂಕ : 27-05-99





**ಪ್ರಸ್ತಾವನೆ :**

ಮೇಲೆ ಓದಲಾದ (1) ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಸಾಲ ಯೋಜನೆಯಡಿಯಲ್ಲಿ ಸಾಲ ಪಡೆಯುವ ಫಲಾನುಭವಿಗಳ ವಾರ್ಷಿಕ ಆದಾಯ ಮಿತಿಯನ್ನು ರೂ. 22,000 ಗಳಿಗೆ ಹೆಚ್ಚಿಸಲಾಗಿದೆ.

ಮೇಲೆ ಓದಲಾದ (2) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಇವರು ರಾಷ್ಟ್ರೀಯ ಹಿಂದುಳಿದ ವರ್ಗಗಳಿ ಹಣಕಾಸು ಮತ್ತು ಅಭಿವೃದ್ಧಿ ನಿಗಮವು ಅನುಷ್ಠಾಗೊಳಿಸುತ್ತಿರುವ ಯೋಜನೆಗಳನ್ನು ಸೌಲಭ್ಯ ಪಡೆಯುವ ಫಲಾನುಭವಿಗಳ ವಾರ್ಷಿಕ ಆದಾಯ ಮಿತಿಯನ್ನು ರೂ. 22,000 ಗಳಿಂದಿ ರೂ. 32,000 ಗಳಿಗೆ ನಿಗಧಿಪಡಿಸಿ (ಗ್ರಾಮಾಂತರ ಮತ್ತು ಪಟ್ಟಣ ಪ್ರದೇಶಗಳಿಗೆ ಸೇರಿ) ಆದೇಶ ಹೊರಡಿಸುವಂತೆ ಕೋರಿರುತ್ತಾರೆ. ಕಾರಣ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ : ಸಕಇ 85 ಬಿಸಿಎ 99,ಬೆಂಗಳೂರು, ದಿನಾಂಕ : 05-10-1999**

ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಯೋಜನೆಗಳಿಗೆ ಮಾತ್ರ ಸಂಬಂಧಿಸಿದಂತೆ, ಆದಾಯ ಮಿತಿಯನ್ನು ಗ್ರಾಮೀಣ ಪ್ರದೇಶಗಳಿಗೆ ವಾರ್ಷಿಕ ರೂ. 31,9532 ಹಾಗೂ ನಗರ ಪ್ರದೇಶಗಳಿಗೆ ರೂ. 42,412ಗಳಿಗೆ ಹೆಚ್ಚಿಸಲು ಅನುಮತಿ ನೀಡಲಾಗಿದೆ. ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿಯಲ್ಲಿ

**2. ಸಾಮೂಹಿಕ ಗಂಗಾ ಕಲ್ಯಾಣ ಯೋಜನೆ:**

**ವಿಷಯ:** ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರಿಗಾಗಿ ವೈಯಕ್ತಿಕ ಕೊಳವೆಬಾವಿ ಯೋಜನೆಯನ್ನು ಅನುಷ್ಠಾರಗೊಳಿಸುವ ಬಗ್ಗೆ ಆದೇಶ.

**ಓದಲಾಗಿದೆ:** (1) ದಿನಾಂಕ:5-2-99ರಸಂ:ಕೆಎಸ್‌ಸಿಟಿಡಿಸಿ:ಜಿಕೆಎಸ್-2:98-99-15621ರಕರ್ನಾಟಕ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಕರ ಪತ್ರ.

(2) ದಿನಾಂಕ : 1-6-99ರ ಸಂ:ಕಅಅನಿ:99-2000:416ರ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಕರ ಪತ್ರ.

**ಪ್ರಸ್ತಾವನೆ:**

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ, ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಗಳು ಗಂಗಾ ಕಲ್ಯಾಣ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿವೆ. ಈ ಯೋಜನೆಯಲ್ಲಿ ಒಂದೇ ಕಡೆ ಕನಿಷ್ಠ 8 ಎಕರೆಯಿಂದ 15 ಎಕರೆ ಜಮೀನು ಹೊಂದಿಕೊಂಡಂತೆ ಇರುವ ಸಣ್ಣ ಮತ್ತು ಅತೀ ಸಣ್ಣ ಪರಿಶಿಷ್ಟ

**ಜಾತಿ:**

ಪರಿಶಿಷ್ಟ ವರ್ಗಗಳು: ಹಿಂದುಗಳಿದ ವರ್ಗಗಳು: ಅಲ್ಪಸಂಖ್ಯಾತರ ಜಮೀನುಗಳನ್ನು ಇ ಗುರುತಿಸಿ ಎರಡು ಅಥವಾ ಮೂರು ಕೊಳವೆ ಬಾವಿಗಳನ್ನು ಕೊರಿಸಿ ಪಂಪು ಸೆಟ್ಟುಗಳನ್ನು ಅಳವಡಿಸಿ ವಿದ್ಯುದ್ದೀಕರಿಸುವ ಮೂಲಕ

ಸಾಮೂಹಿಕ ನೀರಾವರಿ ಸೌಲಭ್ಯವನ್ನು ಒದಗಿಸಲಾಗುತ್ತದೆ. ಈ ಯೋಜನೆಯಡಿ ತಗಲುವ ಎಲ್ಲಾ ವೆಚ್ಚವನ್ನು ಮೇಲಿನ ನಿಗಮಗಳೇ ಭರಿಸುತ್ತಿವೆ.

### ಕರ್ನಾಟಕ ಪರಿಶಿಷ್ಟ ಜಾತಿ:

ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ಕೊಳವೆ ಬಾವಿ ಯೋಜನೆ ಎಂಬ ಇನ್ನೊಂದು ಯೋಜನೆಯನ್ನು ಸಹ ಅನುಷ್ಠಾನಗೊಳಿಸುತ್ತಿದೆ. ಈ ಯೋಚನೆಯಡಿ ಡಿ.ಪಿ.ಎ.ಪಿ. ಅಲ್ಲದ ಪ್ರದೇಶಗಳಲ್ಲಿ 7.5 ಎಕರೆ ತನಕ ಜಮೀನು ಹೊಂದಿರುವ ವೈಯಕ್ತಿಕ ಫಲಾನುಭವಿಯ ಜಮೀನಿನಲ್ಲಿ ಒಂದು ಕೊಳವೆ ಬಾವಿ ಕೊರೆದು ಪಂಪುಸೆಟ್ಟನ್ನು ಅಳವಡಿಸಿಕೊಡಲಾಗುತ್ತದೆ. ಆದರೆ ಇದಕ್ಕೆ ತಗಲುವ ವಿದ್ಯುದ್ದೀಕರಣ ವೆಚ್ಚವನ್ನು ನಿಗಮವು ಭರಿಸುತ್ತಿಲ್ಲ. ಈ ಹಿಂದೆ ಯೋಜನೆಯನ್ನು ಶೇಕಡ 75ರಷ್ಟು ಸಹಾಯಧನದಿಂದ ಹಾಗೂ ಶೇಕಡ 25ರಷ್ಟು ಫಲಾನುಭವಿಗಳು ಬ್ಯಾಂಕಿನಿಂದ ಅಥವಾ ಇನ್ನಿತರ ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿತ್ತು. ಗಂಗಾ ಕಲ್ಯಾಣ ಯೋಜನೆಗೆ ಜಾರಿಗೆ ಬಂದ ನಂತರ ಈ ಯೋಜನೆ ಯಲ್ಲಿಯೂ ಪೂರ್ಣ ಘಟಕ ವೆಚ್ಚ ಅಂದರೆ ರೂ. 65,000 ಗಳನ್ನು ನಿಗಮವೇ ಭರಿಸುತ್ತಿದೆ.

ನಬಾರ್ಡ್ ಸಂಸ್ಥೆಯು ಕಪ್ಪು ಮತ್ತು ಪ್ರದೇಶಗಳಲ್ಲಿ ಕೊಳವೆಬಾವಿಗಳನ್ನು ಕೊರೆಯಬಾರದೆಂದು ಮತ್ತು ಎರಡು ಕೊಳವೆಬಾವಿಗಳ ನಡುವಿನ ಅಂತರ 825 ಅಡಿ ದೂರವಿರಬೇಕೆಂದು ವಿಧಿಸಿರುವ ಷರತ್ತುಗಳನ್ನು ದಿನಾಂಕ : 12-3-97ರ ಸಂಖ್ಯೆ : ಸಕಇ 115 ಎಸ್‌ಡಿ95ರ ಸರ್ಕಾರಿ ಆದೇಶದಲ್ಲಿ ಈ ಯೋಜನೆಗೆ ಅನ್ವಯಿಸುವುದಿಲ್ಲವೆಂದು ಆದೇಶಿಸಿದೆ.

### ಹಿಂದುಳಿದ ವರ್ಗಗಳು:

ಅಲ್ಪ ಸಂಖ್ಯಾತರಿಗೆ ಸೇರಿದ ಜಮೀನುಗಳು ಒಂದೇ ಕಡೆ 8 ರಿಂದ 15 ಎಕರೆಯವರೆಗೆ ಅತ್ಯಲ್ಪವಾಗಿರುವ ಕಾರಣ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಫಲಾನುಭವಿಗಳನ್ನು ಗುರುತಿಸುವಲ್ಲಿ ಹಾಗೂ ಹೆಚ್ಚಿನ ಪ್ರಗತಿ ಸಾಧಿಸುವಲ್ಲಿ ತೊಂದರೆಯಾಗುತ್ತಿದೆಯೆಂದು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರುಗಳು ಸರ್ಕಾರಕ್ಕೆ ವರದಿ ಮಾಡುತ್ತಾ, ಕರ್ನಾಟಕ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಲ್ಲಿರುವಂತೆ ವೈಯಕ್ತಿಕ ಕೊಳವೆಬಾವಿ ನೀರಾವರಿ ಯೋಜನೆಯನ್ನು ತಮ್ಮ ನಿಗಮಗಳೂ ಜಾರಿಗೆ ತರಲು ಸರ್ಕಾರಕ್ಕೆದ ಅನುಮತಿಯನ್ನು ಕೋರಿರುವರು. ಈ ಯೋಜನೆಗಾಗಿ ಆಯವ್ಯಯದಲ್ಲಿ ಯಾವುದೇ ಹಣವನ್ನು ಒದಗಿಸಿಕೊಳ್ಳದೆ ಇರುವ ಪ್ರಯುಕ್ತ ಎ ಈ ಮೇಲಿನ ನಿಗಮಗಳಿಗೆ ಗಂಗಾ ಕಲ್ಯಾಣ ಯೋಜನೆಯ ಅನುಷ್ಟಾನಕ್ಕಾಗಿ ಒದಗಿಸಿಕೊಂಡಿರುವ ಮೊತ್ತದಲ್ಲಿ ಶೇಕಡ 50 ರಷ್ಟು ವೈಯಕ್ತಿಕ ಕೊಳವೆಬಾವಿ ನೀರಾವರಿ ಯೋಜನೆಗೆ ಉಪಯೋಗಿಸಿಕೊಳ್ಳಲು ಸಹ ಅವರು ಸರ್ಕಾರದ ಅನುಮತಿಯನ್ನು ಕೋರಿರುವರು.

ವೈಯಕ್ತಿಕ ಕೊಳವೆಬಾವಿ ನೀರಾವರಿ ಯೋಜನೆಗೆ ಆಯವ್ಯಯದಲ್ಲಿ ಅವಕಾಶವನ್ನು ಕಲ್ಪಿಸಿಕೊಳ್ಳದೇ ಇರುವ ಪ್ರಯುಕ್ತ ಗಂಗಾ ಕಲ್ಯಾಣ ಯೋಜನೆಗೆ ಒದಗಿಸಿಕೊಂಡಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಸಹ ಕೋರಿರುವರು. ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

### ಸರ್ಕಾರಿ ಆದೇಶ ಸಂಖ್ಯೆ : ಸಕಇ 46 ಎಸ್‌ಡಿಸಿ 99, ಬೆಂಗಳೂರು, ದಿನಾಂಕ : 7-10-1999

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಕರ್ನಾಟಕ ಪರಿಶಿಷ್ಟ ನಂತರ ಕರ್ನಾಟಕ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಮಾದರಿಯಲ್ಲಿ ಹಿಂದುಳಿದ





ವರ್ಗಗಳ ಪ್ರವರ್ಗ - ಮತ್ತು ಪ್ರವರ್ಗ -2ಎ ಹಾಗೂ ಅಲ್ಪಸಂಖ್ಯಾತರ ವರ್ಗದ ಸಣ್ಣ ಮತ್ತು ಅತೀ ಸಣ್ಣ ಹಿಡುವಳಿದಾರರ ಜಮೀನುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಸಲುವಾಗಿ ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಇವುಗಳಿಗೆ ಅನುಮತಿ ನೀಡಿದೆ. ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಗಂಗಾ ಕಲ್ಯಾಣ ಯೋಜನೆಗಾಗಿ ಒದಗಿಸಿಕೊಂಡಿರುವ ಹಣದಿಂದ ಶೇಕಡ 50ಕ್ಕೆ ಮೀರಂದಂತೆ ಮೊತ್ತವನ್ನು ಉಪಯೋಗಿಸಿಕೊಳ್ಳಲು ಅನುಮತಿ ನೀಡಿದೆ. ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಇವುಗಳಿಗೆ ಅನುಮತಿ ನೀಡಿದೆ. ಮತ್ತು ಗಂಗಾ ಕಲ್ಯಾಣ ಯೋಜನೆಯನ್ನು ಅನುಷ್ಠಾನಗೊಳಿಸಲಾಗದಂತಹ ಜಮೀನುಗಳಿಗೆ ಮಾತ್ರ ಈ ಯೋಜನೆಯನ್ನು ಸೀಮಿತಗೊಳಿಸತಕ್ಕದ್ದು.

ಗಂಗಾ ಕಲ್ಯಾಣ ಯೋಜನೆಗಾಗಿ ಒದಗಿಸಿಕೊಂಡಿರುವ ಮೊತ್ತದಿಂದ ಶೇಕಡ 50ಕ್ಕೆ ಮೀರದಂತೆ ಹಣವನ್ನು ವೈಯಕ್ತಿಕ ಕೊಳವೆಬಾವಿ ಯೋಜನೆಯ ಅನುಷ್ಠಾನಕ್ಕಾಗಿ ಉಪಯೋಗಿಸಿಕೊಳ್ಳಲು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ಅನುಮತಿ ನೀಡಿದೆ.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ : ಸಕಇ 451 ಪಕವಿ 95 ದಿನಾಂಕ : 7-3-96ರಲ್ಲಿ ರಚಿಸಲಾಗಿರುವ ಅಧಿಕಾರಯುಕ್ತ ಸಮಿತಿಯ ಅನುಮೋದನೆ ಪಡೆದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ.

## GOVERNMENT OF KARNATAKA
## NOTIFICATION
## No. SWD (MW) 4LML 2007, Bangalore, Date: 17-9-2007

In exercise of the powers conferred by Section - 10(b) of the Karnataka State Minorities Commission Act, 1994 (Karnataka Act 31 of 1994). The Karnataka State Minorities Commission has recommended the Government to declare the following Communities as "Minority Communities" for the purpose of the said Act. Accordingly the Government of Karnataka declares the following Communities as the "Minority Communities" under Section 2(d) of the said Act namely.

| | | |
|---|---|---|
| 1. Muslims | 2. Christians | 3. Jains |
| 4. Buddhists | 5. Sikhs | 6. Zorostrians (Parsis) |

### ಟಿಪ್ಪಣಿ

ಜೈನ (ದಿಗಂಬರ) ಸಮುದಾಯಕ್ಕೆ ಸರ್ಕಾರದಿಂದ ಲಭ್ಯವಿರುವ ಸೌಲಭ್ಯಗಳು

### ಜೈನ (ದಿಗಂಬರ) ಹಿಂದುಳಿದ ವರ್ಗ 111(ಬಿ)

(1) 5% ರಷ್ಟು ಸರ್ಕಾರಿ ಉದ್ಯೋಗದಲ್ಲಿ ಮೀಸಲಾತಿ. (2) 5%ರಷ್ಟು ಮೀಸಲಾತಿ ಶಿಕ್ಷಣ ಸಂಸ್ಥೆ ಪ್ರವೇಶಗಳಲ್ಲಿ ವೃತ್ತಿ ಪರ ಮತ್ತು ಸ್ನಾತಕೋತ್ತರ ಇತ್ಯಾದಿ. (3) ಸರ್ಕಾರದ ಸಾರ್ವಜನಿಕ ವಿದ್ಯಾರ್ಥಿ ನಿಲಯಗಳಲ್ಲಿ ಉಚಿತ ಪ್ರವೇಶ ಹೈಸ್ಕೂಲ್ ಮತ್ತು ಮಹಾವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ. (4) ಶಿಕ್ಷಣ ಶುಲ್ಕ ಮರುಪಾವತಿ ಮಹಾವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ, (ಆದಾಯಮಿತಿ 15,000) Reimbersement of tution fees, (5) ಪ್ರೌಢಶಾಲೆ ಮತ್ತು ಮಹಾವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುವ ವವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ನೀಡಿಕೆ. (6) ಸರ್ಕಾರಿ ಹೊಲಿಗೆ ತರಬೇತಿ ಕೇಂದ್ರದಲ್ಲಿ ಪ್ರವೇಶ ಮತ್ತು ಶಿಷ್ಯ

ವೇತನ. (7) ಐಟಿಐ ಮತ್ತು ಬೆರಳಚ್ಚು ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಶಿಷ್ಯವೇತನ. (8) ಐಟಿಐ ಮತ್ತು ಬೆರಳಚ್ಚು ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಶಿಷ್ಯವೇತನ. (8) ಖಾಸಗಿ ವಿದ್ಯಾರ್ಥಿ ನಿಲಯದ ನಿವಾಸಿಗಳಿಗೆ ಊಟದ ವೆಚ್ಚಕ್ಕಾಗಿ ಸಹಾಯಧನ (ರೂ. 200/-). (9) ಸ್ಥಳೀಯ ಸಂಸ್ಥೆಗಳ ಆಡಳಿತ ಮಂಡಳಿಯಲ್ಲಿ ಮೀಸಲಾತಿ.

ಮೇಲ್ಕಂಡ ಸೌಲಭ್ಯಗಳನ್ನು ಪಡೆಯ ಬಯಸುವ ಜೈನ ಸಮುದಾಯದವರು ತಮಗೆ ಸಂಬಂಧಪಟ್ಟ ಕಂದಾಯ ಅಧಿಕಾರಿಗಳಿಂದ (ತಹಸೀಲ್ದಾರ್) ಪ್ರಮಾಣಪತ್ರ ಪಡೆಯುವುದು ಅವಶ್ಯಕವಿದೆ. ಸೌಲಭ್ಯಗಳ ಪ್ರಯೋಜನ ಪಡೆಯಲು ಜಿಲ್ಲೆಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕ್ ಪಂಚಾಯತ್ ಮುಖ್ಯಸ್ಥರಿಗೆ ಅರ್ಜಿ ಸಲ್ಲಿಸಿ ಸಂಪರ್ಕ ಮಾಡಬಹುದಾಗಿದೆ.

(ಸರ್ಕಾರ ಆದೇಶ ಸಂಖ್ಯೆ ಎಸ್.ಡಬ್ಲ್ಯು.ಡಿ. 61 ಬಿಸಿಎ 95 ಬೆಂಗಳೂರು ದಿ.28.12.92ಕ್ಕೆ ಸಂಬಂಧಿಸಿದಂತೆ)

## ನಮೂನೆ -3

## ಇತರೆ ಹಿಂದುಳಿದ ವರ್ಗಗಳ II(ಎ), II(ಬಿ), III(ಎ) ಮತ್ತು III(ಬಿ) ಪಟ್ಟಿಯಲ್ಲಿರುವ ಜಾತಿ ಉಪ ಜಾತಿಯ ವಿದ್ಯಾರ್ಥಿಗಳ ಭರ್ತಿ ಮಾಡಬೇಕಾದ ಅರ್ಜಿ ನಮೂನೆ

ಗೆ,

ತಹಶೀಲ್ದಾರ್

.........................................................ತಾಲ್ಲೂಕು

...............................................................ಜಿಲ್ಲೆ

ಮಾನ್ಯರೆ,

ಶ್ರೀ/ಶ್ರೀಮತಿ...........................................................................ಎಂಬುವರ ಮಗ/ಮಗಳು ಹೆಂಡತಿ / ಗಂಡ....................................................... ಆದ ನಾನು ನನ್ನ ಜಾತಿ ಪ್ರಮಾಣ ಪತ್ರವನ್ನು ಸರ್ವೋಚ್ಚ ನ್ಯಾಯಾಲಯವು ಅಂತಿಮ ಆದೇಶ ನೀಡುವವರೆಗೆ ಉದ್ಯೋಗ ನೇಮಕಾತಿ, ಮೀಸಲಾತಿಯನ್ನು ವೃತ್ತಿಪರ ಶಿಕ್ಷಣ ಸಂಸ್ಥೆಗಳಿಗೆ ಹಾಗೂ ಸ್ನಾತಕೋತ್ತರ ಶಿಕ್ಷಣ ಸಂಸ್ಥೆಗಳ ಪ್ರವೇಶಾವಕಾಶ ಕುರಿತಂತೆ ಪಡೆಯುವುದಕ್ಕಾಗಿ ನೀಡಲು, ತಮ್ಮಲ್ಲಿ ಈ ಕೆಳಕಂಡ ಮಾಹಿತಿಯನ್ನು ಒದಗಿಸುತ್ತಾ ಕೋರುತ್ತೇನೆ.

| | | |
|---|---|---|
| 1. | ಅಭ್ಯರ್ಥಿಯ ಹೆಸರು ಮತ್ತು ಉದ್ಯೋಗ | |
| 2. | ಅಭ್ಯರ್ಥಿಯ ಸ್ವಂತ ಸ್ಥಳ | ಗ್ರಾಮ<br>ತಾಲ್ಲೂಕು<br>ಜಿಲ್ಲೆ |
| 3. | ಅಭ್ಯರ್ಥಿಯ ಹುಟ್ಟಿದ ದಿನಾಂಕ, ವಯಸ್ಸು ಮತ್ತು ಹುಟ್ಟಿದ ಸ್ಥಳ | |
| 4. | ಅಭ್ಯರ್ಥಿಯ ತಂದೆ/ತಾಯಿಯ/ಪೋಷಕರ/ ಹೆಂಡತಿ/ಗಂಡ ಇವರ ಹೆಸರು ಮತ್ತು ಉದ್ಯೋಗ | |
| 5. | ಅಭ್ಯರ್ಥಿಯ ಪ್ರಸ್ತುತ ಅಂಚೆ ವಿಳಾಸ | |





| | | |
|---|---|---|
| 6. | ಅಭ್ಯರ್ಥಿಯ ಖಾಯಂ ಅಂಚೆ ವಿಳಾಸ | |
| 7.<br>8. | ಅಭ್ಯರ್ಥಿಯ ಜಾತಿ ಉಪಜಾತಿ ಹಾಗೂ ವರ್ಗ<br>ಅಭ್ಯರ್ಥಿಯ ಪ್ರಾಥಮಿಕ ಮಾಧ್ಯಮಿಕ ಹಾಗೂ ಪ್ರೌಢ ಶಾಲಾ ವ್ಯಾಸಂಗ ಮಾಡಿದ ಶಾಲೆಗಳ ವಿವರಗಳು | ವ್ಯಾಸಂಗ ಮಾಡಿದ ವರ್ಷ ಶಾಲೆ ಹೆಸರು ಹಾಗೂ ತರಗತಿ ವಿಳಾಸ |
| 9. | ಅಭ್ಯರ್ಥಿಯ ಹಾಗೂ ಅಭ್ಯರ್ಥಿಯ ತಂದೆ/ತಾಯಿಯ/ಪೋಷಕರ/(ತಂದೆ ತಾಯಿ ಜೀವಂತವಾಗಿಲ್ಲದಿದ್ದಲ್ಲಿ) ಹೆಂಡತಿ/ಗಂಡ ಇವರ ಒಟ್ಟು ವಾರ್ಷಿಕ ಆದಾಯ ಎಲ್ಲಾ ಮೂಲಗಳಿಂದ<br>(1) ವೇತನ (ವೇತನ ಶ್ರೇಣಿ)<br>(2) ಜಮೀನಿನ ವಿವರಗಳು<br>(3) ಇತರೇ ಮೂಲಗಳಿಂದ | |
| 10. | ಆದಾಯ ತೆರಿಗೆ ಪಾವತಿದಾರರೇ | |
| 11. | ಸಂಪತ್ತು ತೆರಿಗೆ ಪಾವತಿದಾರರೇ | |
| 12. | ಮಾರಾಟ ತೆರಿಗೆ ಪಾವತಿದಾರರೇ | |

## ಪ್ರಾಮಾಣೀಕೃತ ಘೋಷಣೆ

ಈ ಮೇಲೆ ನನ್ನಿಂದ ಒದಗಿಸಲಾದ ಮಾಹಿತಿಗಳು ನನಗೆ ತಿಳಿದ ಮಟ್ಟಿಗೆ ಸತ್ಯವೆಂದು ಈ ಮೂಲಕ ಪ್ರಾಮಾಣೀಕರಿಸಿ ಘೋಷಿಸುತ್ತೇನೆ.

ತಮ್ಮ ವಿಧೇಯ

ಸ್ಥಳ :

ದಿನಾಂಕ : (ಅಭ್ಯರ್ಥಿ ಸಹಿ)

ಮೇಲೆ ಒದಗಿಸಲಾದ ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತಾ ಈ ಮಾಹಿತಿಗಳು ಅಸತ್ಯವೆಂದು ದೃಢಪಟ್ಟಲ್ಲಿ ಅಪರಾಧ ವಿಚಾರಣೆಗೆ ಬದ್ಧನಾಗಿರುತ್ತೇನೆ.
ತಂದೆ/ತಾಯಿ/ಪೋಷಕರು/ಹೆಂಡತಿ/ಗಂಡ ಇವರನ್ನು ಮತ್ತು ಇವರ ಸಹಿಗಳನ್ನು ನಾವು ಗುರುತಿಸುತ್ತೇವೆ.

## ಇಬ್ಬರು ಸ್ಥಳೀಯ ಸಾಕ್ಷಿಗಳು

ಅಭ್ಯರ್ಥಿ ಮತ್ತು ಯಂದೆ/ತಾಯಿ/ಪೋಷಕರು/ಹೆಂಡತಿ/ಗಂಡ ಇವರನ್ನು ಮತ್ತು ಇವರ ಸಹಿಗಳನ್ನು ನಾವು ಗುರುತಿಸುತ್ತೇವೆ.

ಸಾಕ್ಷಿಗಳ ಸಹಿ 1.

(ಪೂರ್ಣ ವಿಳಾಸದೊಂದಿಗೆ) 2.

ಸ್ಥಳ : ದಿನಾಂಕ:

# ಪರಿಶೀಲನಾ ಪ್ರಮಾಣ ಪತ್ರ

1. ಶ್ರೀ/ಶ್ರೀಮತಿ.......................................................................ಇವರ ಮಗ/ಮಗಳು/ಗಂಡ/ಹೆಂಡತಿ/ಶ್ರೀ/ಶ್ರೀಮತಿ/ಕುಮಾರಿ...........................ಎಂಬುವವರು ಕರ್ನಾಟಕ ರಾಜ್ಯದ.............................................ಜಿಲ್ಲೆಯ/ವಿಭಾಗ..................ಮತ್ತು ಇವರು...........................................................ಗ್ರಾಮ/ಪಟ್ಟಣ ನಗರದಲ್ಲಿ ಸಾಮಾನ್ಯ ನಿವಾಸಿಯಾಗಿದ್ದಾರೆಂದು ಮತ್ತು ಇವರು...........................................................ಜಾತಿ/ ಉಪಜಾತಿಗೆ ಸೇರಿದವರಾಗಿದ್ದು ಇತರೆ ಹಿಂದುಳಿದ ವರ್ಗಗಳ......................................... ವರ್ಗಕ್ಕೆ ಸೇರಿದವರಾಗಿರುತ್ತಾರೆ.

1. ಶ್ರೀ/ಶ್ರೀಮತಿ/ಕುಮಾರಿ.....................................ಇವರ ತಂದೆ/ತಾಯಿ/ ಪೋಷಕರು ಸರ್ಕಾರಿ ಆದೇಶ ಸಂಖ್ಯೆ ಎಸ್.ಡಿಬ್ಲ್ಯು.ಡಿ ಡಿ. 251 ಬಿಸಿಎ 94 ಬೆಂಗಳೂರು ದಿನಾಂಕ 31.11.1995ರ ಅನ್ವಯ ಹಿಂದುಳಿದವರಲ್ಲಿ ಮುಂದುವರಿದವರಾಗಿರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ.

ತಹಶೀಲ್ದಾರ್

..............................ತಾಲ್ಲೂಕು

ಸ್ಥಳ:

ದಿನಾಂಕ:

## ಕಛೇರಿ ಮೊಹರು

**ಸೂಚನೆ:** (1) ಇದರಲ್ಲಿ ಉಪಯೋಗಿಸಲಾಗಿರುವ 'ಸಾಮಾನ್ಯ ನಿವಾಸಿ' ಎಂಬ ಪದವು 1950ರ ಜನತಾ ಪ್ರಾತಿನಿಧ್ಯ ಕಾಯಿದೆಯ 20ನೇ ಅನುಚ್ಛೇದದಲ್ಲಿನ ಅರ್ಥವನ್ನು ಹೊಂದಿರುತ್ತದೆ.

(2) ಪರಿಶೀಲನಾ ಪ್ರಮಾಣ ಪತ್ರ ನೀಡುವ ಅಧಿಕಾರಿಯು ಸರ್ಕಾರಿ ಆದೇಶ ಸಂಖ್ಯೆ ಎಸ್.ಡಬ್ಲ್ಯು.ಡಿ. 251 ಬಿಸಿಎ 95 ಬೆಂಗಳೂರು ದಿನಾಂಕ 31-1-95 ಅನ್ವಯ ಹಿಂದುಳಿದವರಲ್ಲಿ ಮುಂದುವರೆದವರನ್ನು ಗುರುತಿಸಲು ನಿಗದಿಪಡಿಸಲಾಗಿರುವ ಅಂಶಗಳನ್ನು ವಿವರವಾಗಿ ಖಚಿತಪಡಿಸಿಕೊಂಡ ನಂತರವೇ ಪ್ರಮಾಣ ಪತ್ರ ನೀಡತಕ್ಕದ್ದು.





# ವಿವಿಧ ಸರ್ಟಿಫಿಕೇಟ್ ಇತ್ಯಾದಿಗಳಿಗೆ ಸಲ್ಲಿಸುವ ಅರ್ಜಿ

ರಿಂದ,

ಶ್ರೀ/ಶ್ರೀಮತಿ/ಕುಮಾರಿ

...............................................................(ಅರ್ಜಿದಾರರು) ಸ್ಥಳ :

..................................................................................... ದಿನಾಂಕ :

ಮನೆ ನಂಬ್ರ..................................................ರಸ್ತೆ ತಾಲೂಕು : ........................

..................................................................................... ಜಿಲ್ಲೆ : ........................

ಪಿನ್‌ಕೋಡ್ :

ಮಾನ್ಯ ತಹಶೀಲ್ದಾರರಿಗೆ..................................ತಾಲ್ಲೂಕು,

ಅಂಚೆ:........................................(ಕರ್ನಾಟಕ ರಾಜ್ಯ)

| ಕೋರ್ಟ್ ಫೀ ಲೇಬಲನ್ನು ಅಂಟಿಸುವ ಸ್ಥಳ |
|---|

ಸ್ವಾಮಿ,

ವಿಷಯ: ಸರ್ಟಿಫಿಕೇಟ್ ಇತ್ಯಾದಿಗಳಿಗೆ ಸಲ್ಲಿಸುವ ಅರ್ಜಿ

ಕೆಳಗೆ ವಿನಂತಿಸಲಾದ ಸರ್ಟಿಫಿಕೇಟ್‌ಗಳನ್ನು ದಯಪಾಲಿಸಬೇಕಾಗಿ ವಿನಂತಿ

1. ಬೇಕಾದ ಸರ್ಟಿಫಿಕೇಟ್‌ಗಳ ವಿವರಗಳು:
   ಸಾಮಾನ್ಯ ವರ್ಗಗಳ (ಜನರಲ್ ಮೇರಿಟ್)/ಹಿಂದುಳಿದ ವರ್ಗಗಳ ಅಭ್ಯರ್ಥಿಗಳ ಜಾತಿ ಸರ್ಟಿಫಿಕೇಟ್
   ಕುಟುಂಬದ ವಾರ್ಷಿಕ ಆದಾಯದ ಸರ್ಟಿಫಿಕೇಟ್ ಇತ್ಯಾದಿ
   ..........................................................................................................
2. ಅರ್ಜಿದಾರರ ಹೆಸರು :
3. ಅರ್ಜಿದಾರರ ತಂದೆಯ ಹೆಸರು :
4. ಅರ್ಜಿದಾರರ ತಾಯಿಯ ಹೆಸರು :
5. ಅರ್ಜಿದಾರರ ಗಂಡನ ಹೆಸರು :
6. ಅರ್ಜಿದಾರರ ಜಾತಿ :
   ಉಪಜಾತಿ.......................ವರ್ಗ..........................ಮಾತೃಭಾಷೆ.......................
7. ಕುಟುಂಬದ ವಾರ್ಷಿಕ ಆದಾಯ :
   ರೂ.............................................ಮಾತ್ರ (ಅಂಕೆಗಳಲ್ಲಿ)
   ಅಕ್ಷರಗಳಲ್ಲಿ ........................................................................................
   .............................................................................................ಮಾತ್ರ
8. ಕಾರಣಗಳು.........................................................................................
   .......................................................................ಅರ್ಜಿಗಳಿಗೆ ಲಗತ್ತಿಸಲಿಕ್ಕೆ.

ಮೇಲೆ ಕಾಣಿಸಿದ ಎಲ್ಲಾ ವಿವರಗಳು ಸರಿಯಾಗಿದೆ ಮತ್ತು ಸತ್ಯವಾಗಿದೆಯೆಂದು ಈ ಮೂಲಕ ಪ್ರಮಾಣೀಕರಿಸುತ್ತೇವೆ.

ಪ್ರಮಾಣೀಕರಣ/ಎಡಾರ್ಸ್‌ಮೆಂಟ್

ವಿಲೇಜ್ ಎಕೌಂಟೆಂಟ್/ರೆವೆನ್ಯೂ ಇನ್ಸ್‌ಪೆಕ್ಟರ್ **ಅರ್ಜಿದಾರರ ಸಹಿ**